ಜನವಾಚನ ಆಂದೋಲನ
ಪುಸ್ತಕ ಮಾಲೆ-2

# ಹೆಣ್ಣು ಮಗು ಹುಟ್ಟಿದೆ

ಎಸ್. ಇಂದಿರಮ್ಮ



ಭಾರತ ಜ್ಞಾನ ವಿಜ್ಞಾನ ಸಮಿತಿ, ಕರ್ನಾಟಕ ರಾಜ್ಯ

# ಹೆಣ್ಣು ಮಗು ಹುಟ್ಟಿದೆ

ಎನ್. ಇಂದಿರಮ್ಮ

ಭಾರತ ಜ್ಞಾನ ವಿಜ್ಞಾನ ಸಮಿತಿ, ಕರ್ನಾಟಕ ರಾಜ್ಯ

**Hennu Magu Huttide**, A Booklet of Jan vachan Andolan

March 1997

Pages 24+4

© **Bharat Gyan Vigyan Samithi,** Karnataka State

Rs. 4.00

Published by **Sri C.Yathiraju**, Secretary,
Bharat Gyan Vigyan Samithi, C/o Electro Chemical Society of India, Indian Institute of Science Campus, Bangalore-560012

DTP Typeset & Printing At **Aikyaranga Akshara vinyasa,**
No.24, 5th Main, Shobha Lodge Complex, Gandhinagar, Bangalore-09

**THEJASRI PRINTERS,** No.24, 10th Cross, 5th main, S.R.Nagar, Bangalore-27

HEALTH CELL LIBRARY AND DOCUMENTATION UNIT
06197

## ಒಂದು ಮಾತು

ಭಾರತ ಜ್ಞಾನ ವಿಜ್ಞಾನ ಸಮಿತಿ ೫೦ನೇ ಸ್ವಾತಂತ್ರ್ಯೋತ್ಸವದ ಸಂದರ್ಭದಲ್ಲಿ 'ದೇಶ ತಿಳಿಯೋಣ ದೇಶ ಬದಲಿಸೋಣ' ಎಂಬ ರಾಷ್ಟ್ರವ್ಯಾಪಿ ಕಾರ್ಯಕ್ರಮವೊಂದನ್ನು ರೂಪಿಸಿದೆ. ಇದರ ಅಂಗವಾಗಿ ಹೊಸ ಓದುಗರಿಗೆ ಅತಿ ಕಡಿಮೆ ಬೆಲೆಯಲ್ಲಿ ಪುಸ್ತಕಗಳನ್ನು ಒದಗಿಸಿ ಅವರಲ್ಲಿ ವಾಚನಾಭಿರುಚಿಯನ್ನು ಮೂಡಿಸಿ ಅವರನ್ನು ಸಣ್ಣ ಗುಂಪುಗಳಾಗಿ ಸಂಘಟಿಸಿ ಆ ಗುಂಪುಗಳಲ್ಲಿ ನಿರಂತರವಾಗಿ ಓದು ಬರಹ ಮಾಡಿ ತಮ್ಮ ತಮ್ಮಲ್ಲೇ ಚರ್ಚಿಸಿ ತಾವು ಜೀವಿಸುತ್ತಿರುವ ಸಮಾಜದ ಬಗ್ಗೆ, ದೇಶದ ಬಗ್ಗೆ ತಿಳಿದುಕೊಳ್ಳುವಂತೆ ಮಾಡಬಲ್ಲ ಜ್ಞಾನ ಕ್ರಿಯಾ ಕೇಂದ್ರಗಳಾಗಿ ಮಾಡಲು ಮುಂದೆ ಅವೇ ಕಿರು ಗ್ರಂಥಾಲಯಗಳಾಗಿ ಸ್ಥಳೀಯ ಜನರ ಓದುವ ಅಗತ್ಯಗಳನ್ನು ಪೂರೈಸುವಂತಾಗಲು 'ಜನ ವಾಚನ ಆಂದೋಲನ'ವೆಂಬ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಿದೆ. ನಾಡಿನಾದ್ಯಂತ ನಡೆದ ಸಾಕ್ಷರತಾ ಆಂದೋಲನದಲ್ಲಿ ಕಲಿತ ನವ ಸಾಕ್ಷರರು, ಶಾಲೆ ಬಿಟ್ಟವರೂ ತಾವು ಕಲಿತ ಓದು ಬರಹದ ಕೌಶಲ್ಯಗಳನ್ನು ಉತ್ತಮ ಪಡಿಸಿಕೊಳ್ಳಲು ಈ ಕಾರ್ಯಕ್ರಮ ಪೂರಕವಾಗಿರುವುದು. ನಾಡಿನ ಹೆಸರಾಂತ ಲೇಖಕರು ಅನೇಕ ವಿಷಯಗಳ ಬಗ್ಗೆ ಅತ್ಯಂತ ಸಂಕ್ಷಿಪ್ತವಾಗಿ ಆಕರ್ಷಕವಾಗಿ ಸರಳ ಭಾಷೆಯಲ್ಲಿ ಬರೆದಿರುವ ಪುಸ್ತಕಗಳನ್ನು ಈ ಕಾರ್ಯಕ್ರಮದ ಮೂಲಕ ಜನರ ಕೈಗಿಡುತ್ತಿದ್ದೇವೆ. 'ಕಲಿಕೆ ನಿರಂತರ' ಅದಕ್ಕೆ ಈ ಪುಸ್ತಕಗಳು ಪೂರಕ. ಇವುಗಳ ಮೂಲಕ ಜನರಲ್ಲಿ ಜಾಗೃತಿ ಮೂಡಿಸಿ ಅವರ ಮೂಲಭೂತ ಹಕ್ಕುಗಳು, ಕರ್ತವ್ಯಗಳ ಬಗ್ಗೆ ತಿಳುವಳಿಕೆ ಮೂಡಿಸುವುದು, ರಾಷ್ಟ್ರೀಯ ಪರಂಪರೆ, ಕಲೆ, ಸಾಹಿತ್ಯ, ಸಂಸ್ಕೃತಿಯನ್ನು ಪರಿಚಯಿಸಿ ಜನರು ವಿಕೇಂದ್ರೀಕೃತ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕ್ರಿಯಾಶೀಲರಾಗಿ ಪಾಲ್ಗೊಳ್ಳುವಂತೆ ಮಾಡುವುದು ಈ ಕಾರ್ಯಕ್ರಮದ ಉದ್ದೇಶ.

ಅನೇಕ ವೈವಿಧ್ಯಮಯವಾದ ವಿಷಯಗಳನ್ನು ಕುರಿತು ಓದುವ, ಚರ್ಚಿಸುವ, ಹವ್ಯಾಸಗಳನ್ನು ಬೆಳೆಸಲು ನಿರಂತರವಾಗಿ ಜನರು ಕೊಂಡು ಓದಲು ಸಾಧ್ಯವಾಗುವ ಬೆಲೆಯಲ್ಲಿ ಪುಸ್ತಕಗಳನ್ನು ಪ್ರಕಟಿಸಿ ಗ್ರಾಮೀಣ ಪ್ರದೇಶಗಳಿಗೂ ಅವುಗಳನ್ನು ತಲುಪಿಸುವ ಆಶಯದಿಂದ ಈ ಪುಸ್ತಕಗಳನ್ನು ಪ್ರಕಟಿಸಿ ಬಿಡುಗಡೆ ಮಾಡಲಾಗಿದೆ. ನಾಡಿನ ಹೆಸರಾಂತ ಹಾಗೂ ಅನೇಕ ಹೊಸ ಲೇಖಕರು ಈ ಮಾಲಿಕೆಗೆ ಪುಸ್ತಕಗಳನ್ನು ಬರೆದು ಕೊಟ್ಟು ಜನರಲ್ಲಿ ವಾಚಾನಾಭಿರುಚಿಯನ್ನು ಬೆಳೆಸಲು ನಮ್ಮ ನೆರವಿಗೆ ಬಂದಿದ್ದಾರೆ. ಅವರಿಗೆ ಸಮಿತಿಯು ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸುತ್ತದೆ. ಈ ಪುಸ್ತಕಗಳನ್ನು ಆಧಾರವಾಗಿಟ್ಟುಕೊಂಡು ಗುಂಪು ಚರ್ಚೆ ನಡೆಯುವಂತಾದರೆ ನಮ್ಮೆಲ್ಲರ ಶ್ರಮ ಸಾರ್ಥಕ. ಈ ಗುಂಪುಗಳಲ್ಲಿ ನಿರಂತರವಾಗಿ ಈ ಹವ್ಯಾಸವನ್ನು ಮುಂದುವರಿಸಿ ಅರ್ಥಪೂರ್ಣ ಜನ ಗ್ರಂಥಾಲಯ ಚಳುವಳಿಯೊಂದನ್ನು ಪ್ರಾರಂಭಿಸಿ ಬೆಳೆಸುವಂತಾಗಲೆಂದು ಹಾರೈಸಿ ಈ ಪುಸ್ತಕಗಳನ್ನು ತಮ್ಮ ಕೈಗಿಡುತ್ತಿದ್ದೇವೆ.

**ಸಿ.ಯತಿರಾಜ್**

ಕಾರ್ಯದರ್ಶಿ

## ದೃಶ್ಯ 1

ಹೆರಿಗೆ ಕೋಣೆ. ಒಳಗಿನಿಂದ ಒಂದೇ ಸಮನೆ ತಾಯಿ ಅನುಭವಿಸುತ್ತಿರುವ ನೋವಿನ ಚೀತ್ಕಾರ. ಇದು ಹೊರಗಿರುವವರ ಮನ ಕಲಕುವಂತಿದೆ. ಆದರೂ ಎಲ್ಲರ ಮನಸ್ಸಿನಲ್ಲೂ ನಿರೀಕ್ಷೆ! ನಿರೀಕ್ಷೆ! ಎಂಥ ಮಗು ಜನಿಸಿ ಬರಬಹುದು? ಆತುಂಕ ಭರಿತ ಕುತೂಹಲ. ದೊಡ್ಡ ಚೀತ್ಕಾರದೊಂದಿಗೆ 'ತಾಯಿಯ ನೋವಿನ ಅಂತ್ಯ' ಮಗು ಅಳುವ ಧ್ವನಿ ಕೇಳತೊಡಗಿತು. ಎಲ್ಲರ ಕುತೂಹಲ ಇನ್ನೂ ಹೆಚ್ಚಾಯಿತು. ಹೊರಬಂದ ಹಾದಿ ಪ್ರಪಂಚಕ್ಕೆ ಪ್ರಕಟಿಸಿದಳು. "ಹೆಣ್ಣು ಮಗು ಹುಟ್ಟಿದೆ".


"ಅಯ್ಯೋ, ಹೆಣ್ಣೇ?" ಅತ್ತೆಯ ತಿರಸ್ಕಾರದ ಪ್ರತಿಕ್ರಿಯೆ.

"ಗಂಡಾಗಿದ್ರೆ ಚೆನ್ನಾಗಿತ್ತು" ಮಾವನ ನುಡಿ.

"ಎಂಥದೋ, ಗಂಡೋ ಹೆಣ್ಣೋ ಆರೋಗ್ಯವಾಗಿದ್ದರಾಯಿತು" ತನ್ನಲ್ಲೇ ಸಮಾಧಾನ ಮಾಡಿಕೊಂಡ ಅಜ್ಜಿಯ ಅಭಿಪ್ರಾಯ.

"ಎಂಥದಾದರೂ ಸಾಕಲೇ ಬೇಕಲ್ಲ, ಬಿಸಾಕುವುದಕ್ಕಾಗುತ್ತದಾ?" ಗಂಡನ ಅಸಡ್ಡೆಯ ನಿಲುವು.

ಒಳಗೆ ನರಳುತ್ತಾ ಮಲಗಿರುವ ತಾಯಿಯ ನೋವನ್ನು ಕೇಳುವವರೇ ಇಲ್ಲ. ಸಾವು ಬದುಕಿನೊಂದಿಗೆ ಹೋರಾಡಿ ಹೆಣ್ಣು ಕೂಸನ್ನು ಭೂಮಿಗೆ ತಂದೆನಲ್ಲಾ ಎಂಬ ದುಃಖದ ಮಡುವಿನಲ್ಲಿ ಆಕೆ.




ಇಷ್ಟೆಲ್ಲಾ ತಿರಸ್ಕಾರದ ನಡುವೆ ಈ ಭೂಮಿಗೆ ಹೆಣ್ಣು ಮಗುವಿನ ಪ್ರವೇಶ.

## ದೃಶ್ಯ 2

ಗುಡಿಸಲ ಮುಂದೆ ಅಳುತ್ತಾ ಕುಳಿತಿರುವ ಈ ಹುಡುಗಿ ಗೌರಿ. ಇವಳು ಅಳಲು ಕಾರಣ ಈಕೆಯ ತಂದೆ ರಂಗಪ್ಪ ಅವಳನ್ನು ನಾಲ್ಕನೇ ತರಗತಿಗೇ ಶಾಲೆ ಬಿಡಲು ಒತ್ತಾಯಿಸುತ್ತಿದ್ದಾನೆ. ಗೌರಿಯ ತಾಯಿಯದೂ ಇದಕ್ಕೆ ಕುಮ್ಮಕ್ಕು. ಇವಳನ್ನು ಶಾಲೆಗೆ ಕಳಿಸಿದರೆ ತಮ್ಮ ಮನೆ ಕೆಲಸ ಮಾಡುವವರಾರು? ತಾವು ಕೂಲಿಗೆ ಹೋದಾಗ ಮಗುವನ್ನು ನೋಡಿಕೊಳ್ಳುವವರು ಯಾರು? ನಮ್ಮ ಕೇರಿಯಲ್ಲಿ ನೀರಿಗೆ ಬರ. ದೂರದಿಂದ ನೀರು ತರಬೇಕು, ಅವಳಿಲ್ಲದೆ ನಾವು ನೀರು ತರುವುದು ಹೇಗೆ? ಎಂಬುದು ತಂದೆ ತಾಯಿಯರ ಪ್ರಶ್ನೆ. ರಂಗಪ್ಪ ತನ್ನ ಮಗಳ ವಿದ್ಯಾಭ್ಯಾಸಕ್ಕೆ ಅಡ್ಡಿ ಮಾಡುತ್ತಿದ್ದಾನೆ. ಇದಕ್ಕೆ ಇರಬೇಕು, ನಮ್ಮ ದೇಶದಲ್ಲಿ ಓದಿದ ಹೆಂಗಸರ ಸಂಖ್ಯೆ ಶೇ. 39.4ರಷ್ಟು ಮಾತ್ರ ಇರುವುದು.



ಶಾಲೆ ಬಿಡುವ ಹೆಣ್ಣು ಮಕ್ಕಳ ಸಂಖ್ಯೆ ದಿನೇ ದಿನೇ ಏರುತ್ತಿದೆ.

1981-82ರ ಸಮೀಕ್ಷೆಯ ಪ್ರಕಾರ ಪ್ರಾಥಮಿಕ ಶಾಲಾ ಹಂತದಲ್ಲಿ ಶಾಲೆ ಬಿಡುವ ಗಂಡು ಮಕ್ಕಳ ಸಂಖ್ಯೆ ಶೇ. 47 ಇದ್ದರೆ, ಹೆಣ್ಣು ಮಕ್ಕಳ ಸಂಖ್ಯೆ ಶೇ. 55.5. ಪ್ರೌಢಶಾಲಾ ಹಂತದಲ್ಲಿ ಶಾಲೆ ಬಿಡುವ ಗಂಡು ಮಕ್ಕಳ ಪ್ರಮಾಣ ಶೇ. 68.5 ಮತ್ತು ಹೆಣ್ಣು ಮಕ್ಕಳ ಸಂಖ್ಯೆ ಶೇ. 77.7. ಈ ಅಂಕಿ ಸಂಖ್ಯೆಯ ಪುರಾಣವನ್ನು ರಂಗಪ್ಪನ ಮುಂದ ಓದಿದರೆ ಈ ಮುಗ್ಧನಿಗೆ ಅದು ಅರ್ಥವಾದೀತೆ?

## ದೃಶ್ಯ 3

ಜಯ, ಲಕ್ಷ್ಮಿ, ಪಾರ್ವತಿ ಮತ್ತು ದೇವಿ ರಂಗಾಪುರದ ಒಂದು ಬಡಾವಣೆಯಲ್ಲಿ ವಾಸಿಸುತ್ತಾರೆ. ಎಲ್ಲಾ ಒಂದೇ ಓರಗೆಯವರು. ಅವರಲ್ಲಿ ಜಯ ಊರಿನ ಶ್ರೀಮಂತರೊಬ್ಬರ ಮನೆಯಲ್ಲಿ ಕೆಲಸ ಮಾಡುತ್ತಾಳೆ. ತಿಂಗಳಿಗೆ ಅವಳ ಸಂಬಳ 60 ರೂ. ಲಕ್ಷ್ಮಿಯ ವಿಷಯವೇ ಬೇರೆ. ಅವಳು ಊರ ಹೊರ ವಲಯದಲ್ಲಿರುವ ಊದುಬತ್ತಿ ಕಾರ್ಖಾನೆಗೆ ಹೋಗುತ್ತಾಳೆ. ಬೆಳಗಿನಿಂದ ಸಂಜೆಯವರೆಗೂ ಆಕೆಗೆ ಬಿಡುವಿಲ್ಲದ ಕೆಲಸ. ತಿಂಗಳಿಗೆ 300 ರೂ.ವರೆಗೂ ಸಂಪಾದಿಸುತ್ತಾಳೆ. ಪಾರ್ವತಿ ಬೇರೆ ಮನೆಗೆ ಕೆಲಸಕ್ಕೆ ಹೋಗಳು. ಮನೆಯಲ್ಲಿಯೇ ತಮ್ಮನನ್ನು ಎತ್ತಿಆಡಿಸುವುದು, ದನಕರುಗಳಿಗೆ ಮೇವು ತರುವುದು, ನೀರು ತರುವುದು, ಸೌದೆ ತರುವುದು, ಎಲ್ಲವೂ ಇವಳ ಪಾಲಿಗೆ. ಇನ್ನು ದೇವಿ ದಿನಕ್ಕೆ 500 ರಿಂದ 600 ಬೀಡಿ ಕಟ್ಟುತ್ತಾಳೆ. ತಿಂಗಳಿಗೆ ನಾಲ್ಕು ನೂರರವರೆಗೂ ಸಂಪಾದಿಸುತ್ತಾಳೆ.

ಇವರೆಲ್ಲರ ಆಟವಾಡುವ ದಿನಗಳು ಎಲ್ಲಿ ಹೋದವು? ಇವರ ತಂದೆ ತಾಯಿಯರಿಗೆ ಇದರ ಪರಿವೆ ಇದೆಯೇ? 1981ರ ಗಣತಿಯಪ್ರಕಾರ ಶೇ. 88.35ರಷ್ಟು ಮಂದಿ 14 ವರ್ಷ ವಯಸ್ಸಿನೊಳಗಿನ ಬಾಲಕಿಯರು ಪೂರ್ಣ ಪ್ರಮಾಣದಲ್ಲಿ ದುಡಿಮೆಯಲ್ಲಿ ತೊಡಗಿರುತ್ತಾರೆ. 1985ರ ಗಣತಿಯ ಪ್ರಕಾರ ಒಬ್ಬ ಹೆಣ್ಣು ಮಗಳು ತಾನು ಮಾಡಿದ ದುಡಿತದಿಂದ ಕುಟುಂಬಕ್ಕೆ ವರ್ಷಕ್ಕೆ 39,600 ರೂ. ಆದಾಯವನ್ನು ಹೆಚ್ಚಿಸಿರುತ್ತಾಳೆ. ಇಷ್ಟು ದೊಡ್ಡ ಮೊತ್ತದ ಆದಾಯ ತಂದು ಕೊಡುವ ಈ ಬಾಲೆಯರಿಗೆ, ಅವರ ತಂದೆ ತಾಯಿ, ಅವರನ್ನು ದುಡಿಸಿಕೊಳ್ಳುವ ಸಮಾಜ ಪ್ರತಿಯಾಗಿ ಏನು ಕೊಟ್ಟಿವೆ? ಅವರ ಆಟವಾಡುವ ದಿನಗಳು ತಿರುಗಿ ಬಂದಾವೆ?

## ದೃಶ್ಯ 4

ಇದೊಂದು ಬಂಗಲೆ. ಕುಳಿತು ಪೇಪರ್ ಓದುತ್ತಿರುವವಳು ಸುಜಾತ. ಗಂಡನ ಮನೆಯವರು

ತುಂಬಾ ಶ್ರೀಮಂತರೆಂದು ತಂದೆ ಮದುವೆ ಮಾಡಿಕೊಟ್ಟರು. ಮದುವೆಯಾಗಿ ಮೂರು ವರ್ಷದಲ್ಲೇ ಅವಳು ಎರಡು ಹೆಣ್ಣು ಮಕ್ಕಳ ತಾಯಿ. ಈಗ ಮತ್ತೆ ಗರ್ಭಿಣಿ. ಗಂಡ,ಒಂದು ವಾರದಿಂದ "ಭ್ರೂಣ ಪರೀಕ್ಷೆ ಮಾಡಿಸೋಣ" ಎಂದು ಒತ್ತಾಯಿಸುತ್ತಿದ್ದಾನೆ. ಈಕೆಗೆ ಇಷ್ಟವಿಲ್ಲ. ಈಕೆಯ ಇಷ್ಟಾನಿಷ್ಟಗಳನ್ನು ಕೇಳುವವರಾರು? ಮನೆಯಲ್ಲಿ ಎಲ್ಲರೂ ಗಂಡನ ಪರ. ವಿದ್ಯಾವಂತೆಯಾದ ಸುಜಾತ ತನ್ನ ಹಣೆಬರಹವನ್ನು ನಂಬಿಕೂಡುವವಳಲ್ಲ. ಆದರೆ ಈ ವಿಷಯದಲ್ಲಿ ಅಸಹಾಯಕಿ. ಭ್ರೂಣದ ಆರೋಗ್ಯ ತಿಳಿಯಲು ವಿಜ್ಞಾನ ಮಾಡಿದ ಅವಿಷ್ಕಾರ ದುರುಪಯೋಗವಾಗುತ್ತಿರುವುದರ ಬಗ್ಗೆ ಸುಜಾತಳಿಗೆ ದುಃಖವಿದೆ. ಭ್ರೂಣ ಹೆಣ್ಣು ಎಂದು ತಿಳಿದರೆ ಗಂಡ ನಾಶಪಡಿಸಲು ಆಗ್ರಹಿಸುತ್ತಾನೆ. ಸುಜಾತನಂತಹ ಎಷ್ಟೋ ಸೋದರಿಯರು ನಮ್ಮ ಸಮಾಜದಲ್ಲಿರಬಹುದು. ಅವರ ಕೂಗು ಅರಣ್ಯರೋದನ ಮಾತ್ರ. ಇಂದು ನಮ್ಮ ದೇಶದಲ್ಲಿ ಹೆಣ್ಣು ಗಂಡುಗಳ ಪ್ರಮಾಣದಲ್ಲಿ ಅಸಮತೋಲನ ಉಂಟಾಗಿದೆ. ಗಂಡು ಹೆಣ್ಣುಗಳು ಕ್ರಮವಾಗಿ 1000:933 ರಷ್ಟಿದೆ. ಇದರಿಂದ ಮುಂದೆ ಬಹುಪತಿತ್ವ, ಅತ್ಯಾಚಾರ, ವೇಶ್ಯಾವೃತ್ತಿ ಹೆಚ್ಚಿದರೆ ಆಶ್ಚರ್ಯಪಡಬೇಕಿಲ್ಲ.

**ದೃಶ್ಯ 5**

ಈಕೆ ಕಮಲಮ್ಮ. ಹೂವಿನಹಳ್ಳಿಯ ಗ್ರಾಮ ಪಂಚಾಯತಿ ಸದಸ್ಯೆ. ಇಂದಿನ ದಿನಗಳಲ್ಲಿ ಹಳ್ಳಿಯ ಜನರ ಕೈಗೇ ಅಧಿಕಾರ ಕೊಡಬೇಕು ಎಂದು ಸರಕಾರ ಆಲೋಚಿಸಿದಾಗ, ಪಂಚಾಯತಿಗಳಿಗೆ ಬೆಲೆ ಬಂತು. ಮುಂದುವರಿದು ಮಹಿಳೆಯರಿಗೆ ಮೀಸಲಾತಿ ಎಂದಾಗ ಮತ್ತೂ ಬೆಲೆ ಬಂತು. ಆಗ ಹೂವಿನ ಹಳ್ಳಿಯಕಮಲಮ್ಮನೂ ಓಟಿಗೆ ನಿಲ್ಲುವಂತಾಯಿತು. ಗಂಡ, ನೆಂಟರಿಷ್ಟರು, ಸ್ನೇಹಿತರು ಪುಸಲಾಯಿಸಿದರು, ಕಮಲಮ್ಮ ಒಪ್ಪಿದಳು. ಎಲ್ಲಾ ಚೆನ್ನಾಗಿ ಓಡಾಡಿದರು. ಕಮಲಮ್ಮ ಗೆದ್ದಳು. "ಈಯಮ್ಮ ಏನು ಮಾಡುತ್ತಾಳಪ್ಪಾ?" ಎಂದು ಮೂಗು ಮುರಿದವರೇ ಎಲ್ಲ. ಆಕೆಯನ್ನು ಕೆಲಸ ಮಾಡಲೇ ಬಿಡಲಿಲ್ಲ. ಇವತ್ತಿಗೂ ಆಕೆಗೆ ಪಂಚಾಯತಿಯ ತಳಾಬುಡಾ ಗೊತ್ತಿಲ್ಲ. ಸಭೆಗಳಿಗೆ ಹೋಗಲು ಮನೆಯಲ್ಲಿ ಕೆಲಸದ ಹೊರೆ. ಹೋದರೂ ಗಂಡನೂ ಜೊತೆಯಲ್ಲಿ ಹೊರಡುತ್ತಾನೆ. ಅಲ್ಲಿ ಎಲ್ಲಾ ಅವನದೇ ಮಾತು. ಬೇರೆ ವಿಷಯಗಳನ್ನು ತಿಳಿದುಕೊಳ್ಳಲು ಗಂಡ ಬಿಡುತ್ತಲೇ ಇಲ್ಲ. ಎಲ್ಲಾ ಅವನದೇ ಕಾರುಬಾರು. ಇವಳು ಇಲ್ಲಿ ನಾಮಕಾವಸ್ತೆ ಸದಸ್ಯೆ.

**ದೃಶ್ಯ 6**

ಕಾಲೇಜಿನಲ್ಲಿ ಪಾಠ ಮಾಡುತ್ತಿರುವ ಈಕೆ ಸುಮತಿ. ಮಧ್ಯಮ ವರ್ಗದ ಕುಟುಂಬದಿಂದ ಬಂದವಳು. ಬಾಲ್ಯದಿಂದಲೂ ಓದಿನಲ್ಲಿ ಆಸಕ್ತಿ. ತಂದೆ ಶಿಕ್ಷಕರು. ಕಷ್ಟದಿಂದಲೇ ಓದಿಸಿದರು. ಬುದ್ಧಿವಂತೆ ಸುಮತಿ ಚೆನ್ನಾಗಿ ಓದಿ ಕಾಲೇಜೊಂದರಲ್ಲಿ ಉಪನ್ಯಾಸಕಿ ಕೆಲಸವನ್ನೂ ದಕ್ಕಿಸಿಕೊಂಡಳು. ಇವಳೆಂದರೆ ವಿದ್ಯಾರ್ಥಿನಿಯರಿಗೆ ಅಚ್ಚುಮೆಚ್ಚು. ತುಂಬಾ ಆಸಕ್ತಿ ವಹಿಸಿ ಕಲಿಸುತ್ತಾಳೆ. ಅಲ್ಲದೆ ಸಮಾಜ ಸೇವೆಯಲ್ಲಿಯೂ ಆಸಕ್ತಿ. ಸ್ವಂತ ಕಾರಣಕ್ಕಾಗಿ ಮದುವೆಯಾಗದೇ ಉಳಿದಳು. ಕೆಲಸದಲ್ಲಿ

ತೃಪ್ತಿಇದೆ. ಸಮಾಜ ಅವಳ ಬಗ್ಗೆ ಒಳ್ಳೆಯ ಮಾತನ್ನಾಡುತ್ತಿದೆ. ಆದರೆ ಮನೆಯವರಿಗೆ ಮಾತ್ರ ಅವಳು ದುರದೃಷ್ಟದ ಹೆಣ್ಣು. ನೆಂಟರಿಷ್ಟರ ದೃಷ್ಟಿಯಲ್ಲಿ ಮದುವೆಯಾಗಿ ಮಕ್ಕಳನ್ನು ಪಡೆದು ಜೀವನ ಸಾರ್ಥಕ ಮಾಡಿಕೊಳ್ಳದ ಪಾಪದ ಹೆಣ್ಣು. ಇವಳು ಮಾಡುವ ಸಮಾಜದ ಯಾವ ಕೆಲಸವೂ ಅವರಿಗೆ ದೊಡ್ಡದು ಎನಿಸುವುದಿಲ್ಲ.


ಗಂಡಸು ಬ್ರಹ್ಮಚಾರಿಯಾದರೆ ಜನ ಗೌರವಿಸುತ್ತಾರೆ. ಆದರೆ ಹೆಂಗಸು ಮದುವೆಯಾಗದೆ ಉಳಿದರೆ ಹಿಯಾಳಿಸುತ್ತಾರೆ. ಬ್ರಹ್ಮಚರ್ಯ ಗಂಡಸಿನಲ್ಲಿ ಅತಿ ಶ್ರೇಷ್ಠ ಮೌಲ್ಯ. ಬ್ರಹ್ಮಚಾರಿ ಗಂಡಸು ಮಾಡುವ ಸಾಧನೆಗಳು ಗಣನೆಗೆ ಬರುತ್ತವೆ. ಆದರೆ ಬ್ರಹ್ಮಚಾರಿ ಹೆಂಗಸಿನ ಸಾಧನೆ, ಸಾಮರ್ಥ್ಯಕ್ಕೆ ಕಾಸಿನ ಕಿಮ್ಮತ್ತೂ ಇಲ್ಲ. ಅವಳು ಮದುವೆಯಾದರೆ ಮಾತ್ರ ಅವಳ ಕೆಲಸಗಳಿಗೆ ಮೌಲ್ಯ ಎನ್ನುತ್ತದೆ ಈ ಸಮಾಜ.

"ಪ್ರತಿಯೊಬ್ಬ ಭಾರತೀಯ ಹೆಣ್ಣು ಮದುವೆಯಾಗಲೆಂದೇ ಹುಟ್ಟಿದವಳಲ್ಲ. ಒಬ್ಬನ ಸೇವೆ ಮಾಡುವ ಬದಲು ಇಡೀ ಸಮಾಜದ ಸೇವೆಗಾಗಿ ತಮ್ಮನ್ನು ಮುಡುಪಾಗಿಟ್ಟುಕೊಂಡ ಅನೇಕ ಹುಡುಗಿಯರನ್ನು ನಾನು ನಿಮಗೆ ತೋರಿಸಬಲ್ಲೆ" ಎಂದರು ಗಾಂಧೀಜಿ. ಸಮಾಜ ಈ ಮಾತುಗಳನ್ನು ಅರ್ಥ ಮಾಡಿಕೊಳ್ಳುವ ಸ್ಥಿತಿಯಲ್ಲಿದೆಯೇ? ಅವರ ಮನಸ್ಸುಗಳು ಎಂದಾದರೂ ವಿಶಾಲವಾದಾವೇ?

### ದೃಶ್ಯ 7

ಇವಳು ನಮ್ಮ ಮನೆ ಕೆಲಸ ಮಾಡಲು ಬರುವ ಶಾರದ. ಇವಳನ್ನು ನೋಡಿದರೆ ಇನ್ನೂ ಹುಡುಗಿ ಎನಿಸುತ್ತದೆ. ಆದರೆ ಆಕೆ ಈಗಾಗಲೇ ತಾಯಿ. ತನ್ನ 14ನೇ ವಯಸ್ಸಿನಲ್ಲಿಯೇ ಇವಳಿಗೆ ಮದುವೆ ಮಾಡಿದರು. ಗಂಡನೂ ಚಿಕ್ಕವಯಸ್ಸಿನವನೇ. 16 ವರ್ಷಕ್ಕೆ ಇವಳು ತಾಯಾದಳು. ಕಾಡುವ ಬಡತನ. ಸರಿಯಾಗಿ ಊಟ ತಿಂಡಿ ದೊರೆಯಲಿಲ್ಲ. ಚಿಕ್ಕ ವಯಸ್ಸಿನಲ್ಲೇ ತಾಯಿಯಾದುದಕ್ಕೆ ದೇಹ ಬಸಿರು ಮತ್ತು ಹೆರಿಗೆಗೆ ತಕ್ಕಂತೆ ಬೆಳವಣಿಗೆ ಆಗದ್ದರಿಂದ ಬಡವಾದಳು. ಗಂಡನಿಗೆ ಮಾತ್ರ ಅಂತಹ ನಿಶ್ಶಕ್ತಿಯಾಗಿಲ್ಲ. ಅವನೂ ಅಲ್ಲಿ ಇಲ್ಲಿ ಕೂಲಿ ಮಾಡುತ್ತಾನೆ. ಬಾಲ್ಯ ವಿವಾಹ ಕಾನೂನುರಿತ್ಯಾ ಅಪರಾಧ. ಇದರಿಂದ ಗಂಡಿಗಾದ ನಷ್ಟ ಕಡಿಮೆ, ಹೆಣ್ಣಿಗೆ ಮಾತ್ರ ಮಾನಸಿಕ ಮತ್ತು ದೈಹಿಕ ಆಘಾತ ಕಟ್ಟಿಟ್ಟ ಬುತ್ತಿ. ಬಲಿಯದ ದೇಹವನ್ನು ದಾಂಪತ್ಯಕ್ಕೆ ಒಡ್ಡಿಕೃಷವಾಗಿ ನರಳುತ್ತಿರುವ ಶಾರದಳ ನೋವನ್ನು ಯಾರು ಅರ್ಥ ಮಾಡಿಕೊಳ್ಳುತ್ತಾರೆ?






## ದೃಶ್ಯ 8

ಇವಳು ಅನುರಾಧ. ಕಚೇರಿಯೊಂದರಲ್ಲಿ ದುಡಿಯುತ್ತಾಳೆ. ಗಂಡ ಮಕ್ಕಳೊಂದಿಗೆ ಸಂತೋಷದಿಂದ ಸಂಸಾರ ಮಾಡಿಕೊಂಡಿದ್ದಳು. ಆದರೆ ಹಠಾತ್ತಾಗಿ ಕಳೆದ ತಿಂಗಳು ಅಪಘಾತದಲ್ಲಿ ಗಂಡನನ್ನು ಕಳೆದುಕೊಂಡಳು. ಈಗ ಸಮಾಜದ ಕಣ್ಣಲ್ಲಿ ಈಕೆ ವಿಧವೆ. ಗಂಡನ ಹಿಂದೆ ತನ್ನ ಸೌಭಾಗ್ಯವೆಲ್ಲವೂ ಹೋಯಿತು, ಇನ್ನು ತನ್ನ ಮುಂದಿನ ಬದುಕು ಕತ್ತಲು ಎಂದು ಆಕೆ ತಿಳಿದುಕೊಂಡಿಲ್ಲ. ಆದರೆ ಸಮಾಜ, ಅಡಿಗಡಿಗೂ ನೀನು ವಿಧವೆ, ಅಬಲೆ, ನಿಶ್ಯಕ್ತಳು, ಶುಭ ಕಾರ್ಯದಲ್ಲಿ ಭಾಗವಹಿಸಲಾರೆ ಎಂದು ನೆನಪಿಸುತ್ತದೆ. ಗಂಡ ಇದ್ದಾಗಲೂ ಮಕ್ಕಳ ಜವಾಬ್ದಾರಿ ಇವಳದೇ. ಈಗಲೂ ಚೆನ್ನಾಗಿಯೇ ನೋಡಿಕೊಳ್ಳುತ್ತಾಳೆ. ಆದರೆಜನ ಬಿಡಬೇಕಲ್ಲ. ಪಾಪ ಎಂದು ಅನುಕಂಪ ತೋರುತ್ತಾರೆ. ಕೆಲಸ ಮಾಡುವ ಕಡೆ ಗಂಡಸರು ಕೆಟ್ಟ ಕಣ್ಣಿನಿಂದ ನೋಡುತ್ತಾರೆ. ಬಂಧು ಬಳಗದವರು ಆಸ್ತಿ ಮೇಲೆ ಕಣ್ಣು ಹಾಕುತ್ತಾರೆ. ಅಂತೂ ವಿಧವೆ ಪಟ್ಟ ಅವಳನ್ನು ಬೆಂಬಿಡದ ಭೂತವಾಗಿ ಕಾಡುತ್ತಿದೆ.

ವಿಧವೆಯನ್ನು ಪವಿತ್ರ ಕಾರ್ಯದಲ್ಲಿ ತೊಡಗಿಸಿ, ಉದ್ಧಾರದ ಸೋಗು ಹಾಕುವ ಇಂದಿನ ಜನನಾಯಕರು, ವಿಧವೆಗೆ ಶಕ್ತಿ ನೀಡುತ್ತಾರೆಯೇ? ಆಕೆಗೆ ಮಾನಸಿಕ ಸ್ಥೈರ್ಯ ತುಂಬುತ್ತಾರೆಯೇ? ಗಂಡನಿಲ್ಲ ಎಂದಾಕ್ಷಣ ಆಕೆಯಲ್ಲಿರುವ ಮಾನಸಿಕ ಸ್ಥೈರ್ಯ ಮತ್ತು ಆತ್ಮವಿಶ್ವಾಸ ಸಾಯುತ್ತದೆಯೇ?

## ದೃಶ್ಯ 9

ಇವಳು ರೇಖಾ. ಪ್ರತಿದಿನ ಹಳ್ಳಿಯಿಂದ ಬಸ್ಸಿನಲ್ಲಿ 5-6 ಕಿ.ಮೀ. ಪ್ರಯಾಣ ಮಾಡಿ ಕಾಲೇಜಿಗೆ ಹೋಗುತ್ತಾಳೆ. ಇವಳ್ನ ತಂದೆ ತಾಯಿ ಒಪ್ಪಿ ಕಳುಹಿಸಿರುವುದೇ ಹೆಚ್ಚು. ಆದರೆ ಒಂದು ನೋವು ಇವಳನ್ನು ಕಾಡುತ್ತಿದೆ. ಹೋಗಿ ಬರುವಾಗ ಬಸ್ಸಿನಲ್ಲಿ, ಬೀದಿಯಲ್ಲಿ ಬೀದಿ ಕಾಮಣ್ಣರ ಕಾಟ. ಪ್ರತಿದಿನ ಬಸ್ಸು ಇಳಿಯುತ್ತಲೇ ಹಿಂದೆಯೇ ಬರುತ್ತಾರೆ. "ಹಕ್ಕಿ ಹೋಗುತ್ತಿದೆ ನೋಡ್ರೋ" ಎನ್ನುತ್ತಾರೆ. ಇವಳಿಗೆ ಮೊದಲೇ ಅಳುಕು ಸ್ವಭಾವ. ಓಡಿ ಓಡಿ ಕಾಲೇಜು ಸೇರುತ್ತಾಳೆ. ಒಂದು ದಿನ ತನ್ನ ಸ್ನೇಹಿತೆಯೊಂದಿಗೆ ಬಸ್ಸು ಇಳಿದಳು. ಸರಿ, "ಯಾವುದೋ ಹೊಸ ಹಕ್ಕಿ ಬಂದಿದೆ ನೋಡ್ರೋ" ಎನ್ನುತ್ತಾ ಹಿಂಬಾಲಿಸಿದರು.

ಇದನ್ನು ಸಹಿಸಿಕೊಳ್ಳಲಾಗದೇ ತನ್ನಲ್ಲೇ ನೋಯುತ್ತಿದ್ದಾಳೆ. ತಂದೆ ತಾಯಿಗಳಿಗೆ ಹೇಳಿದರೆ, ಕಾಲೇಜು ಬಿಡಿಸುತ್ತಾರೆಂಬ ಭಯ. ಕಾಲೇಜಿನಲ್ಲಿ ಮುಖ್ಯಸ್ಥರಿಗೆ ಹೇಳಿದರೆ ಪೋಲಿ ಹುಡುಗರು

ಏನು ಮಾಡುತ್ತಾರೋ ಎಂಬ ಆತಂಕ. ಹೆಣ್ಣು ಧೈರ್ಯ ವಹಿಸಿ ಹಿಂತಿರುಗಿ ಬಿದ್ದರೆ, ಸಂಘಟಿತಳಾಗಿ ಹೋರಾಡಿದರೆ ಇದನ್ನು ಕೊನೆಗಾಣಿಸಬಹುದೇನೋ. ಬೀದಿ ಕಾಮಣ್ಣರ ಕಾಟಕ್ಕೆ ಪೂರ್ಣ ವಿರಾಮ ಇಡಬಹುದೇನೋ?

## ದೃಶ್ಯ 10

ಈ ದೇವಸ್ಥಾನದ ಹಜಾರದಲ್ಲಿ ಮಲಗಿರುವವರು ಯಾರು ಗೊತ್ತೆ? ಈಕೆ ನಿಂಗಮ್ಮ, ಪಕ್ಕದ ಕುರುಬರಹಳ್ಳಿಯವಳು. ಒಂದು ವಾರದಿಂದ ಏನೋ ಒಂಥ ರೀತಿ ಮಾತನಾಡುತ್ತಿದ್ದಳು. ಒಂದೇ ಸಮನೆ ಓಡುವುದು, ಮಗುವನ್ನು ಹಿಡಿದುಕೊಂಡು ಹೊಡೆಯುವುದು ಮಾಡುತ್ತಿದ್ದಳು. ಗಂಡ ಒಂದೆರಡು ದಿನ ನೋಡಿಯೇ ನೋಡಿದ. ಊರಿನ ಅಯ್ನೋರ ಬಳಿ ಹೋದ. "ದೆವ್ವ ಹಾಕ್ಕೊಂಡಿದೆ" ಎಂದು ಅಪ್ಪಣೆ ಕೊಡಿಸಿದರು. ಪಕ್ಕದಳ್ಳಿಯ ಮಾರಮ್ಮನ ದೇವಸ್ಥಾನದಲ್ಲಿ ಒಂದು ವಾರವಿದ್ದರೆ ದೆವ್ವ ಬಿಡುತ್ತದೆ ಎಂದು ಹೇಳಿದರು. ಸರಿ, ಗಂಡ ಕರೆದುಕೊಂಡು ಬಂದು, ದೇವಸ್ತಾನದಲ್ಲಿ ಮಲಗಿಸಿದ. ಪೂಜಾರಿ ಬಂದು ಪೂಜೆ ಹಾಕಿದ. ತಣ್ಣೀರು ತಂದು ತಲೆಯ ಮೇಲೆ ಸುರಿದ. ಗಡಗಡ ನಡುಗುವ ಥಳಿ. ನಿಂಗಮ್ಮನಲುಗಿಹೋದಳು. ಬೇವಿನಸೊಪ್ಪು ತಂದ ಪೂಜಾರಿ ಒಂದೇ ಸಮನೆ ರಪರಪನೆ ನಿಂಗಮ್ಮನಿಗೆ ಬಾರಿಸಲು ಪ್ರಾರಂಭಿಸಿದ. ನಿಂಗಮ್ಮ ತಡೆಯಲಾರದೆ ಬೇಡ, ಬೇಡ ಎಂದು ಚೀರಾಡಿದಳು. ಆದರೂ ಹೊಡೆತ ನಿಲ್ಲಲಿಲ್ಲ. "ಹೋಗ್ತೀನಿ, ಹೋಗ್ತೀನಿ" ಬಿಡಿ ಎಂದು ಬೇಡಿದಳು. ಸರಿ ಏಟು ನಿಂತಿತು. ಸುಸ್ತಾಗಿ ಹೋದಳು ನಿಂಗಮ್ಮ. ನೋಡಿ ಹೇಗೆ ಹೆಣದಂತೆ ಮಲಗಿದ್ದಾಳೆ? ಪೂಜಾರಿ "ಇನ್ನೆಂದೂ ದೆವ್ವ ಈ ಕಡೆ ಬರಲ್ಲ" ಎಂದು ದಕ್ಷಿಣೆ ವಸೂಲಿ ಮಾಡಿ ಹೊರಟ.

ಹೆಂಗಸರಿಗೇ ಏಕೆ ದೆವ್ವ ಬಡಿಯುತ್ತದೆ? ಗಂಡಸರಿಗೆ ಏಕೆ ಅದು ಹಿಡಿಯುವುದಿಲ್ಲ. ಹೆಣ್ಣನ್ನು ಸಾರ್ವಜನಿಕ ವಸ್ತು ಮಾಡಲು, ಆಕೆಯ ದೇಹ ಸಿರಿಯನ್ನು ಪ್ರದರ್ಶಿಸಲು ಪುರುಷ ಹೂಡಿದ ತಂತ್ರ ಇದಲ್ಲವೇ?

## ದೃಶ್ಯ 11

ರಾಮನಹಳ್ಳಿ ಇನ್ನೂ ಬಸ್ಸಿನ ಸೌಕರ್ಯವಿಲ್ಲದ ಒಂದು ಕುಗ್ರಾಮ. ಈ ಹಳ್ಳಿಯ ಬಹುಪಾಲು ಜನ ಕೃಷಿಕರು. ಹೊಲ ಮನೆಗಳೇ ಇವರ ಕಾರ್ಯಕ್ಷೇತ್ರ. ಚುನಾವಣೆ ಬಂದಾಗ ಓಟು ಹಾಕಿದರೆ ಮುಗಿಯಿತು, ಮುಂದಿನ ರಾಜಕೀಯ ಇವರಿಗೆ ತಿಳಿಯದ ವಿಷಯ. ಊರ ಹೊರಗಿನ ಆಂಜನೇಯನ ಗುಡಿ, ಹರಿಜನ ಕೇರಿಯ ದುರ್ಗಮ್ಮನ ದೇವಸ್ಥಾನ. ಒಂದು ಸಣ್ಣ ಮಸೀದಿ ಇವೇ ಇವರು ಪೂಜಿಸುವ ದೇವರುಗಳು. ತಮ್ಮ 'ಹಳ್ಳಿಯ ಆಗುಹೋಗುಗಳಿಗೆ ಈ ದೇವರೇ ಹೊಣೆ ಎಂಬುದು ಇವರ ನಂಬಿಕೆ.

ಈಗ ಕಾರ್ತೀಕ ಮಾಸ. ಈ ದಿನಗಳಲ್ಲಿ ಇಲ್ಲಿ ದುರ್ಗಮ್ಮನ ಜಾತ್ರೆ ನಡೆಯುತ್ತವೆ. ಇದಕ್ಕೆ ಅಕ್ಕಪಕ್ಕದ ಊರುಗಳಿಂದ ಜನ ಬಂದು ಸೇರಿದ್ದಾರೆ. ಊರಿನ ಹಿರಿಯರೆಲ್ಲಾ ತುಂಬಾ




ಮುತುವರ್ಜಿಯಿಂದ ವ್ಯವಸ್ಥೆ ಮಾಡುತ್ತಿದ್ದಾರೆ. ಜಾತ್ರೆಯ ವಿಧಿಗಳು ಪ್ರಾರಂಭವಾಗಿವೆ. ಊರಿನ ತರುಣರು ತುಂಬಾ ಸಡಗರದಿಂದ ಓಡಾಡುತ್ತಿದ್ದಾರೆ. ದೇವರ ಗುಡಿಯ ಮುಂದಿನ ಹೊಂಡದ ತುಂಬಾ ಓಕುಳಿ ನೀರನ್ನು ತುಂಬಿಸಿದ್ದಾರೆ. ತಮಟೆ, ವಾಲಗದ ಸದ್ದು ಜೋರಾಯಿತು. ಹರಿಜನ ಕೇರಿಯ ದೇವದಾಸಿಯರನ್ನು ಮೆರವಣಿಗೆಯಲ್ಲಿ ಕರೆತರಲಾಯಿತು. ಜನರಲ್ಲಿ ವಿದ್ಯುತ್ ಸಂಚಾರವಾದಂತಾಯಿತು. ತರುಣರು ಚುರುಕಾದರು. ಎಲ್ಲರೂ ಹೊಂಡದ ಸುತ್ತಮುತ್ತುವರಿಯತೊಡಗಿದರು. ಹಿರಿಯರ ಅಣತಿಯಂತೆ ಓಕುಳಿಯನ್ನು ತುಂಬಿ ತುಂಬಿ ದೇವದಾಸಿಯರ ಮೈಮೇಲೆ ಎರಚತೊಡಗಿದರು. ದೇವದಾಸಿಯರು ಇವರಿಂದ ತಪ್ಪಿಸಿಕೊಳ್ಳಲು ಪರದಾಡಲಾರಂಭಿಸಿದರು.ಜನ ನೋಡಿ ಸಂತೋಷಪಟ್ಟರು. ಇದೇ ಓಕುಳಿ, ದೇವರಿಗೆ ಸೇವೆ. ಯಾವ ದೇವರು ಈರೀತಿ ಸೇವೆ ಮಾಡಿ ಎಂದು ಕೇಳುತ್ತದೆ? ದೇವರಿಗೆ ಭಕ್ತಿತೋರುವ ಹೆಸರಿನಲ್ಲಿ ಸಾವಿರಾರು ಹಸಿದ ಕಣ್ಣುಗಳು ನೆಂದು ತೊಪ್ಪೆಯಾದ ತರುಣಿಯರ ದೇಹಗಳನ್ನು ನೋಡಿ ಮನರಂಜನೆ ಪಡೆಯುವ ರೀತಿ ಇದು. ಅದೆಷ್ಟೋ ವರ್ಷ ಗಳಿಂದ ಇದು ದೇವ ದಾಸಿಯರ ಬದುಕಿನ ಅಂಗವಾಗಿ ಮೂಡಿ ಬಂದು. ಅವರಿಗೆ ತುಳಿ ತಕ್ಕೊಳಗಾಗುವುದೇ ಬದುಕು. ಊರಿನ ಮುಖಂಡರಿಗೆ, ತರುಣರಿಗೆ ದೌರ್ಜನ್ಯ ಮಾಡುವುದೇ ನ್ಯಾಯ. ಪ್ರತಿಭಟನೆ ದೇವರಿಗೆ ಅಪಚಾರ ಮಾಡಿ ದಂತೆ.

**ದೃಶ್ಯ 12**

ಆ ದಿನ ರಮಾ ಕಾಲೇಜಿಗೆ ಹೋಗಲೆಂದು ಬಸ್ ಏರಿದಳು. ಬಸ್ ಸ್ವಲ್ಪ ದೂರ ಹೋಗಿರಬಹುದು. ಅವಳ ಕಾಲಿಗೆ ಏನೋ ತಾಗಿದಂತಾಯಿತು. ಹಿಂತಿರುಗಿ ನೋಡುತ್ತಾಳೆ, ಒಬ್ಬ ಗಂಡಸು ಅವಳ ಕಾಲನ್ನು ತುಳಿಯುತ್ತಿದ್ದಾನೆ. ತುಂಬಾ ಬೇಸರವಾಯಿತು ರಮಾಳಿಗೆ. "ಯಾಕ್ರಿ ಕಾಲು ತುಳಿಯುತ್ತಿದ್ದೀರಾ? ಆಗಿನಿಂದ ನೋಡುತ್ತಿದ್ದೇನೆ, ಇದೇನಾ ನೀವು ಹೆಣ್ಣು ಮಕ್ಕಳನ್ನು ನಡೆಸಿಕೊಳ್ಳುವ ರೀತಿ" ಎಂದು ಜೋರು ಮಾಡಿದಳು. ಆ ಗಂಡಸು ರಮಳ ಮೇಲೆ ಹಾರಿ ಹೋದ. "ನಾನೇನು ಮಾಡಿದೆ? ನನಗೇನು ಅಕ್ಕ ತಂಗಿಯರಿಲ್ವೇ?" ಎಂದ. ಬಸ್ಸಿನಲ್ಲಿದ್ದ ಬೇರೆ ಪ್ರಯಾಣಿಕರೂ ಆ ಗಂಡಸಿನೊಂದಿಗೇ ಸೇರಿಕೊಂಡರು. "ಬಸ್ಸಿನಲ್ಲಿ ತುಂಬಾ ಜನ ಇದ್ದಾರೆ. ಇದೆಲ್ಲಾ ಮಾಮೂಲು

ನೀವು ಸಹಿಸಿಕೊಂಡು ಹೋಗಬೇಕು, ಇಲ್ಲದಿದ್ದರೆ ನೀವು ಬರಲೇಬಾರದು, ಕಾರು ಮಾಡಿಕೊಂಡು ಹೋಗಿ". ಹೀಗೆ ನಾನಾ ಮಾತುಗಳು ಒಂದರ ಹಿಂದೆ ಒಂದು ಎರಗಿದವು. ರಮಾ ನಿಸ್ಸಹಾಯಕಳು. ಇದನ್ನು ಮುಂದುವರೆಸಿ ಜನರ ಬಾಯಿಗೆ ಆಹಾರವಾಗುವುದು ಅವಳಿಗೆ ಇಷ್ಟವಾಗಲಿಲ್ಲ. ಬಸ್ಸಿನಲ್ಲಿದ್ದ ಹೆಂಗಸರೂ ಬಾಯಿ ತೆರೆಯಲಿಲ್ಲ. ಮಹಿಳೆತನಗಾದ ಹಿಂಸೆಯನ್ನು ವಿರೋಧಿಸಬಾರದೆ? ಅವಳಿಗೆ ನ್ಯಾಯ ದೊರೆಯುವುದು ಕನಸಿನ ಮಾತೆ?

## ದೃಶ್ಯ 13

ಆಸ್ಪತ್ರೆಯಲ್ಲಿ ಸಾವು ಬದುಕಿನೊಂದಿಗೆ ಹೋರಾಡುತ್ತಿರುವ ಆಕೆ ನನ್ನ ಸ್ನೇಹಿತೆ ಸುನೀತಾ. ಇವಳು ಮದುವೆಯಾಗುವವರೆಗೂ ತುಂಬಾ ಚೂಟಿಯಿಂದಿದ್ದಳು. ಕಾಲೇಜಿನ ಎಲ್ಲಾ ಚಟುವಟಿಕೆಗಳಲ್ಲಿ ಅವಳೇ ಮೊದಲು. ಎಷ್ಟು ಚೆನ್ನಾಗಿ ಹಾಡುತ್ತಿದ್ದಳು. ಆಟದಲ್ಲಿ ಸದಾ ಮುಂದು. ಇನ್ನೇನು ಪದವಿಯ ಕೊನೆಯ ಪರೀಕ್ಷೆ ಮುಗಿಯಬೇಕು, ಇಂಜನಿಯರ್ ವರ ಸಿಕ್ಕಿದ ಎಂದು ಇವಳ ತಂದೆ ತಾಯಿ ಮದುವೆ ಗೊತ್ತುಮಾಡಿದರು. ಸರಿ ಅವರ ಬೇಡಿಕೆಗಳು ಪ್ರಾರಂಭವಾದವು. ಎಲ್ಲವನ್ನೂ ಈಡೇರಿಸಿದರು. ನಾನು ನನ್ನ ಸ್ನೇಹಿತರೊಂದಿಗೆ ಮದುವೆಗೆ ಹೋಗಿದ್ದೆ. ಗಂಡಿನ ಕಡೆರವರ ಅಪೇಕ್ಷೆಯಂತೆ ತುಂಬಾ ವಿಜೃಂಭಣೆಯಿಂದ ಮದುವೆ ಮಾಡಿದರು. ಸುನೀತಾ ಗಂಡನ ಮನೆ ಸೇರಿದಳು. ಕೆಲವು ದಿನ ಅವಳ ಸುದ್ದಿ ತಿಳಿಯಲಿಲ್ಲ. ಮದುವೆಯಾದ ನಂತರ ಸಂಸಾರದಲ್ಲಿ ಮುಳುಗಿ ನಮಗ್ಯಾರಿಗೂ ಪತ್ರ ಬರೆಯಲಿಲ್ಲವೇನೋ ಎಂದುಕೊಂಡೆವು. ಆದರೆ ನಿನ್ನೆ ಇದ್ದಕ್ಕಿದ್ದಂತೆ ಸುನೀತಾ ಸ್ಟವ್ ಸಿಡಿದು ಆಸ್ಪತ್ರೆಯಲ್ಲಿದ್ದಾಳೆ ಎಂಬ ಸುದ್ದಿ ಬಂತು. ನಾನೂ ನನ್ನ ಸ್ನೇಹಿತರು ಬಂದೆವು. ಆಗಲೇ ಸುನೀತಾಳ ತಂದೆ ತಾಯಿ ಅಣ್ಣಾ ಎಲ್ಲಾ



ಅಲ್ಲಿದ್ದರು. ನೋಡಿ, ಸುನೀತಾ ಸುಟ್ಟುಕೊಂಡು ಮಲಗಿದ್ದಾಳೆ, ಉಳಿಯುವ ನಂಬಿಕೆಯಿಲ್ಲ ಎನ್ನುತ್ತಾರೆ ವೈದ್ಯರು. ಅಣ್ಣ ಇದೊಂದು ಕೊಲೆಯ ಪ್ರಯತ್ನ ಎನ್ನುತ್ತಾರೆ. ಆಕೆಯ ತಂದೆ ತಾಯಿ ಮಾತು ಬಾರದ ಮೂಕರಾಗಿದ್ದಾರೆ. ಸುನೀತಾ ಬದುಕುಳಿಯು ತ್ತಾಳೆಯೇ? ಗಂಡನ ಮನೆಯವರ ನಿಲ್ಲದ ಬೇಡಿಕೆಗಳು ಅವಳನ್ನು ಜರ್ಝರಿ ತಳನ್ನಾಗಿಸಿದ್ದು ನಂತರ ತಿಳಿಯಿತು.

ವರದಕ್ಷಿಣೆ ಪಡೆದು ನಡೆಯುತ್ತಿರುವ ಇಂತಹ ಸಂಬಂಧಗಳಲ್ಲಿ ಎಂದಾದರೂ ಪ್ರೀತಿ ಇರಲು ಸಾಧ್ಯವೇ?

## ದೃಶ್ಯ 14

ಇದು ಮುನಿಯಪ್ಪನ ಗುಡಿಸಲು. ಕುಡಿದು ಬಿದ್ದಿದ್ದಾನೆ ನೋಡಿ. ಅವನ ಹೆಂಡತಿ ಮತ್ತು




ಮಕ್ಕಳು ಒಂದು ಮೂಲೆಯಲ್ಲಿ ಅಳುತ್ತಾ ಕುಳಿತಿದ್ದಾರೆ. ಮುನಿಯಪ್ಪ, ಜಯಮ್ಮ ಕೂಲಿ ಮಾಡಿ ಜೀವನ ನಡೆಸುತ್ತಿದ್ದಾರೆ. ಇದುವರೆಗೆ ಇದ್ದ ಎರಡು ಮಕ್ಕಳನ್ನು ಇದ್ದುದರಲ್ಲಿ ಚೆನ್ನಾಗಿ ಸಾಕಿಕೊಂಡು ಸಂತೋಷವಾಗಿಯೇ ಇದ್ದರು. ಇತ್ತೀಚೆಗೆ ಮುನಿಯಪ್ಪ ತಡವಾಗಿ ಮನೆಗೆ ಬರತೊಡಗಿದ. ಬಂದಾಗ ಕುಡಿದಿರುತ್ತಿದ್ದ. ಜಯಮ್ಮ ಕೆಲವು ದಿನ ಸಹಿಸಿಕೊಂಡಿದ್ದಳು. ಆದರೆ ಬರುಬರುತ್ತಾ ಇದು ಹೆಚ್ಚಾಯಿತು. ಕ್ರಮೇಣ ಕುಡಿದು ಬಂದ ಮುನಿಯಪ್ಪ ದುಡ್ಡಿಗಾಗಿ ಜಯಮ್ಮನನ್ನು ಪೀಡಿಸತೊಡಗಿದ. ಆಕೆ ಹಣ ಕೊಡಲೊಪ್ಪದಿದ್ದಾಗ ಹೊಡೆಯತೊಡಗಿದ. ಈಗ ಕುಡಿದು ಬಂದು ದಿನವೂ ಹೊಡೆಯುವುದು ಅವನ ಪರಿಪಾಠ. ಜಯಮ್ಮ ಕಂಗಾಲಾಗಿದ್ದಾಳೆ. ಗಂಡ ಇವಳ ಬುದ್ಧಿ ಮಾತು ಕೇಳುವ ಸ್ಥಿತಿಯಲ್ಲಿ ಇಲ್ಲ.

ಇಂದು ಸರಕಾರ ಪಾನ ನಿಷೇಧದ ಬಗ್ಗೆ ಮಾತನಾಡುತ್ತಿದೆ. ಅದು ಅಕ್ಷರಶಃ ಜಾರಿಗೆ ಬಂದರೆ ಜಯಮ್ಮನಂತಹ ಎಷ್ಟೋ ಹೆಣ್ಣು ಮಕ್ಕಳಿಗೆ ಬಿಡುಗಡೆ ದೊರೆಯುತ್ತದೆ. ಅದು ಸಾಧ್ಯವಾಗದೆ ಹೋದರೆ ನೋವು ಅನುಭವಿಸುತ್ತಿರುವ ಹೆಣ್ಣು ಮಕ್ಕಳು ಒಂದುಗೂಡಿ ಪ್ರತಿಭಟಿಸಬೇಕಾಗುತ್ತದೆ. ಆಂಧ್ರಪ್ರದೇಶದ ನೆಲ್ಲೂರಿನ ಹೋರಾಟದಿಂದ ಇವರು ಪಾಠ ಕಲಿಯಲೇಬೇಕಾಗುತ್ತದೆ. ಗಂಡಸಿನ

ಕುರಿತ ಕೊನೆಗೊಳ್ಳಲೇಬೇಕಾಗುತ್ತದೆ.

## ದೃಶ್ಯ 15

ಇಲ್ಲಿರುವ ಶಾಂತಿ ಏಕೆ ಅಳುತ್ತಾ ಕುಳಿತಿದ್ದಾಳೆ ಗೊತ್ತಾಯಿತೇ? ಈಕೆಯ ಮೇಲೆ ಅತ್ಯಾಚಾರ ಮಾಡಲಾಗಿದೆ. ಶಾಂತಿ ತುಂಬಾ ಬಡ ಕುಟುಂಬದ ಹೆಣ್ಣು. ತಾಯಿ ತಂದೆ ಇಲ್ಲ. ಅಣ್ಣ ಅತ್ತಿಗೆ ಆಶ್ರಯದಲ್ಲಿದ್ದಾಳೆ. ಒಂದು ಮನೆಯಲ್ಲಿ ಕೆಲಸಕ್ಕಿದ್ದಳು. ಬಂದ ಹಣವನ್ನು ಅಣ್ಣ, ಅತ್ತಿಗೆಗೆ



ಕೊಡುತ್ತಿದ್ದಳು. ಜೀವನ ತಕ್ಕ ಮಟ್ಟಿಗೆ ನೆಮ್ಮದಿಯಿಂದಿತ್ತು. ಆದರೆ, ಆ ದಿನ ಶಾಂತಿ ಕೆಲಸ ಮಾಡುವ ಮನೆಯಲ್ಲಿ ಹಿರಿಯರಾರೂ ಇರಲಿಲ್ಲ. ಹೆಂಗಸರು ದೇವಸ್ಥಾನಕ್ಕೆ ಹೋಗಿದ್ದರು. ಇದ್ದವನು ಆ ಮನೆಯಾಕೆಯ ತಮ್ಮ ಮಾತ್ರ. ಇನ್ನೇನು ಅವಳು ಎಲ್ಲಾ ಕೆಲಸ ಮುಗಿಸಿ ಹೊರಡಬೇಕು, ಆಗ ಆ ಯುವಕ ಇವಳ ಹತ್ತಿರ ಬಂದು ಕೈ ಹಿಡಿದ. ಇವಳಿಗೇ ದಿಕ್ಕೇ ತೋಚದಂತಾಯಿತು.ಪ್ರತಿಭಟಿಸಿದಳು. ಏನೂ ನಡೆಯಲಿಲ್ಲ. ಇವಳನ್ನು ಸಮೀಪಿಸಿ ಬಲಾತ್ಕರಿಸಿದ. ಶಾಂತಿ ಎಷ್ಟೇಹೋರಾಡಿದರೂ ಆಕೆಯ ಮೇಲೆ ಅತ್ಯಾಚಾರವಾಗಿತ್ತು. ಆಕೆಯ ಶೀಲ ಮಣ್ಣಾಗಿತ್ತು. ಶಾಂತಿ ಕುಸಿದಳು. ಸ್ವಲ್ಪ ಹೊತ್ತಿನ ನಂತರ ಎದ್ದು ಅಣ್ಣನ ಮನೆ ಕಾಣುವವರೆಗೂ ಓಡಿದಳು. ತಂಗಿಯ ಸ್ಥಿತಿ ನೋಡಿ ಅಣ್ಣ ಅತ್ತಿಗೆ ಕೆಂಡವಾದರು. ತಂಗಿಯನ್ನೇ ನಿಂದಿಸಿದರು. ಹಿಯಾಳಿಸಿದರು. ಛೀಮಾರಿ ಹಾಕಿದರು. ಇಂದು ನಡೆದ ಅಪಚಾರಕ್ಕೆ ಶಾಂತಿ ಕಾರಣಳೇ? ಅವಳೊಬ್ಬಳನ್ನೇ ನಿಂದಿಸಿದರೆ ಸರಿಯೇ? ಅವಳಿಗೆ ನ್ಯಾಯ ದೊರಕಿಸಿಕೊಡುತ್ತದೆಯೇ ಸಮಾಜ? ಹೆಣ್ಣು ಧೈರ್ಯದಿಂದ ಇಂತಹ ಪರಿಸ್ಥಿತಿಯನ್ನು ಎದುರಿಸಬೇಕಲ್ಲವೇ? ಗಂಡು ಇದರ ಬಗ್ಗೆ ಎಂದೂ ಯೋಚಿಸಲಾರೆ. ಏಕೆಂದರೆ, ಗಂಡಸಿನ ಮೇಲೆ ಎಂದೂ ಅತ್ಯಾಚಾರವಾಗುವುದಿಲ್ಲ. ಆದರೂ ಅವರ ಪಾವಿತ್ರ್ಯ ಎಂದೂ ಹಾಳಾಗುವುದಿಲ್ಲ. ಅವರ ಶೀಲ ಎಂದೆಂದಿಗೂ ಸುರಕ್ಷಿತ.

## ದೃಶ್ಯ 16

ಇದು ರಾಮಚಂದ್ರ ಮತ್ತು ಲಕ್ಷ್ಮಿಯ ಮನೆ. ಗಂಡ, ಹೆಂಡತಿಯರನ್ನು ಹೋಲಿಸಿ ನೋಡಿ. ಗಂಡ ದಷ್ಟಪುಷ್ಟವಾಗಿದ್ದಾನೆ. ಹೆಂಡತಿ ಕೃಶವಾಗಿದ್ದಾಳೆ ಕಡ್ಡಿಯ ಹಾಗೆ. ಇವಳಿಗೆ ಪೌಷ್ಟಿಕ ಆಹಾರದ ಕೊರತೆ ಇದೆ. ಇಬ್ಬರೂ ದುಡಿದು ತರುತ್ತಾರೆ. ಆದರೆ ಲಕ್ಷ್ಮಿಯ ಗಂಡ, ಮಕ್ಕಳನ್ನು ಚೆನ್ನಾಗಿ ನೋಡಿಕೊಂಡು, ಅವರಿಗೆ ಬಹುಪಾಲು ಆಹಾರವನ್ನು ಬಡಿಸಿ ಉಳಿದದ್ದನ್ನು ಮಾತ್ರ ತಾನು ತಿನ್ನುತ್ತಾಳೆ. ಹೀಗೆ ಆಹಾರದ ಕೊರತೆಯಿಂದ ನರಳಿ ನರಳಿ ಅವಳ ದೇಹ ಬೆಳವಣಿಗೆ ಕುಂಠಿತವಾಗಿದೆ. ಆಕೆಯ ಜನನಾಂಗಗಳು ಸರಿಯಾಗಿ ಬೆಳವಣಿಗೆ ಆಗದೆ ಮಗುವಿನ ತೂಕ ಕಡಿಮೆ ಆಗಿದೆ. ಇವಳ ಮಗು ಈಗಿನಿಂದಲೇ ರೋಗಿಷ್ಟನಾಗಿ ಬೆಳೆಯುವ ಅಪಾಯವಿದೆ. ಬಲಿಷ್ಠವಾಗಿ ಬೆಳೆಯಲಾರದು. ಅಲ್ಲದೆ ಇವಳು ಕಾಯಿಲೆಯನ್ನು ಉದಾಸೀನ ಮಾಡುತ್ತಾಳೆ. ತಕ್ಷಣ ವೈದ್ಯರ ಹತ್ತಿರ ಹೋಗುವುದಿಲ್ಲ. ಗಂಡಸಿಗೆ ಕಾಯಿಲೆ ಆದರೆ ಈ ರೀತಿ ಉದಾಸೀನ ಮಾಡಲಾರರು.

ಇದು ಕೇವಲ ಲಕ್ಷ್ಮಿಯೂ ಒಬ್ಬಳ ಸಮಸ್ಯೆ ಅಲ್ಲ. ನಮ್ಮ ದೇಶದಲ್ಲಿ ಪ್ರತಿ ನೂರು ಗಂಡು ಮಕ್ಕಳ ಪೈಕಿ ಇಬ್ಬರಿಗೆ ಪೋಷಕಾಂಶದ ಕೊರತೆ ಇದ್ದರೆ ಪ್ರತಿ ನೂರು ಹೆಣ್ಣು ಮಕ್ಕಳಲ್ಲಿ 18 ಮಂದಿಗೆ ಪೋಷಕಾಂಶದ ತೀವ್ರ ಕೊರತೆ ಮತ್ತು 16 ಮಂದಿಗೆ ಸಾಧಾರಣ ಕೊರತೆ ಇರುವುದಾಗಿ ಕಂಡು ಬಂದಿದೆ. ಅದರಲ್ಲೂ ಗರ್ಭಿಣಿ ಮತ್ತು ಹಾಲೂಡುವ ತಾಯಂದಿರಲ್ಲಿ ಪೋಷಕಾಂಶದ ಕೊರತೆ ಇನ್ನೂ ಹೆಚ್ಚು. ನಮ್ಮ ಹೆಣ್ಣು ಮಕ್ಕಳು ಇನ್ನೂ ಎಷ್ಟು ದಿನ ಈ ಕೊರತೆಯಿಂದ ನರಳಬೇಕೋ? ಗಂಡು ಕುಲ ಹೆಣ್ಣಿಗೂ ಪೌಷ್ಟಿಕ ಆಹಾರದ ಅವಶ್ಯಕತೆ ಇದೆ ಎಂದು ಅರ್ಥ ಮಾಡಿಕೊಂಡಾಗ ಮಾತ್ರ ಹೆಣ್ಣಿಗೂ ಆರೋಗ್ಯಕರ ಜೀವನ ದೊರಕಿತು.

## ದೃಶ್ಯ 17

ಆ ದಿನ ನಾನು ಮತ್ತು ನನ್ನ ಸ್ನೇಹಿತ ತಿರುಗಾಡಲು ಹೊರಟಿದ್ದೆವು. ಜನರ ತಿರುಗಾಟ ಮಾಮೂಲಾಗಿತ್ತು. ಮಾತನಾಡಿಕೊಂಡು ಹೋಗುತ್ತಿದ್ದೆವು. ಮಾರ್ಗ ಮಧ್ಯದಲ್ಲಿ ಅನೇಕ ಸ್ನೇಹಿತರು ಭೇಟಿಯಾದರು. ದಾರಿಗುಂಟ ಸಾಗುತ್ತಿದ್ದಂತೆಯೇ ಕತ್ತಲಾಗಿತ್ತು. ನಾವಿಬ್ಬರೂ ಮನೆಯ ಕಡೆ ಹೊರಟೆವು. ಬಸ್‌ಸ್ಟ್ಯಾಂಡ್ ಬಿಟ್ಟು ಮುಂದೆ ಬಂದಿದ್ದವು. ಗಾಬರಿಯಾದ ಕೆಲವು ಜನ ಓಡುತ್ತಾ ಬಂದರು. ಏನೆಂದು ವಿಚಾರಿಸಿದಾಗ "ಜಾತಿ ಗಲಭೆ ಪ್ರಾರಂಭವಾಗಿದೆ. ಹಿಂದೂಗಳು ಮುಸ್ಲಿಮರನ್ನು, ಮುಸ್ಲಿಮರು ಹಿಂದೂಗಳನ್ನು ಹಿಡಿದು ಚುಚ್ಚುತ್ತಿದ್ದಾರೆ, ಓಡಿ, ಓಡಿ" ಎಂದರು. ನಮಗಿಬ್ಬರಿಗೂ ದಿಕ್ಕೇ ತೋಚದಂತಾಯಿತು. ನಾವೂ ಓಡತೊಡಗಿದೆವು. ಮುಂದೆ ಗಲಭೆ ಇನ್ನೂ ಘೋರವಾಗಿತ್ತು. ಹೆಂಗಸರು ಮಕ್ಕಳ ಗೋಳಾಟ ಹೇಳತೀರದು. ಓಡಲಾರದೆ ಬಿಡಲಾರದೆ ಅಸಹಾಯಕರಾಗಿ ಕೂಗುತ್ತಿದ್ದರು. ಇದು ಹಿಂಸೆಯ ರೂಪ ತಳೆದು ಇಡೀ ಊರಿಗೆ ಊರೇ ಹತ್ತಿ ಉರಿಯತೊಡಗಿತು. ನಾವಿಬ್ಬರೂ ಹೇಗೋ ಓಡಿ ಒಂದು ಮನೆ ಹೊಕ್ಕೆವು. ದೂರದಿಂದ ಹೆಣ್ಣು ಮಕ್ಕಳ ಆರ್ತನಾದ ಕಿವಿಗಪ್ಪಳಿಸುತ್ತಿತ್ತು. ನಮಗಂತೂ ದುಃಖ ತಡೆಯಲಾಗಲಿಲ್ಲ. ಅಸಹಾಯಕತೆಯಿಂದ ಮೂಕರಾಗಿದ್ದೆವು. ಆ ರಾತ್ರಿ ಆ ಮನೆಯಲ್ಲಿಯೇ ಕಳೆಯಿತು. ಬೆಳಗ್ಗೆ

ಆದಂತೆಯೇ ಅನೇಕ ಸುದ್ದಿ ಬರತೊಡಗಿದವು. ಇದೇ ಸಂದರ್ಭವನ್ನು ಬಳಸಿಕೊಂಡ ಕೆಟ್ಟ ಜನ ಅನೇಕ ತರುಣಿಯರ ಮೇಲೆ ಅತ್ಯಾಚಾರ ಮಾಡಿದ್ದರು.ತಂದೆಯನ್ನು ಕಳೆದುಕೊಂಡ ಮಕ್ಕಳು, ಗಂಡನನ್ನು ಕಳೆದುಕೊಂಡ ಹೆಂಗಸರು ಅನಾಥರಾದರು. ವಿಧವೆಯರಾದರು. ಅತ್ಯಾಚಾರದಿಂದ ನೊಂದವರು ಹೆಣ್ಣು ಮಕ್ಕಳು. ಗಂಡು ಜಾತಿಗೆ ಎಂತಹ ನೋವೂ ಇಲ್ಲ. ವಿದ್ಯಾವಂತರಾಗದ ಹೆಣ್ಣು ಮಕ್ಕಳ ಜೀವನದಲ್ಲಿ ಕತ್ತಲೆ ಕವಿಯಿತು.

## ದೃಶ್ಯ 18

ಇದು ನಮ್ಮೂರಿನ ಒಂದು ಕೇರಿ. ಇದನ್ನು ಪ್ರೇಮನಗರ ಎನ್ನುವರು. ಇದರಲ್ಲಿ ವಾಸ ಮಾಡುವವರೆಲ್ಲರೂ ಸೂಳೆಗಾರಿಕೆಯನ್ನು ವೃತ್ತಿಯನ್ನಾಗಿ ಮಾಡಿಕೊಂಡವರು. ಹೆಣ್ಣು ಕುಲಕ್ಕೆ ಅಗೌರವ ತರುವ ಗುಂಪು ಇದು. ಇವರಲ್ಲಿ ಒಬ್ಬಾಕೆಯ ಮಗಳು ಲತಾ ನನ್ನ ಜೊತೆ ಕಾಲೇಜಿನಲ್ಲಿ ಓದುತ್ತಾಳೆ. ಅವಳು ಯಾವಾಗಲೂ ಖಿನ್ನಳಾಗಿರುತ್ತಾಳೆ. ನಗುಮುಖವನ್ನೇ ತೋರುವುದಿಲ್ಲ. ಸದಾ ಏನೋ ಯೋಚಿಸುವಂತಿರುತ್ತಾಳೆ. ಹೇಳುತ್ತಾಳೆ "ಖಂಡಿತಾ ನಮಗೆ ಇಂತಹ ಬದುಕು ಇಷ್ಟವಿಲ್ಲ. ಪ್ರತಿ ದಿನ ನಮ್ಮ ಮನೆಗೆ ಭೇಟಿ ನೀಡುವ ಗಂಡಸರು ನಮ್ಮ ಬದುಕಿನ ಬಗ್ಗೆ ಎಂದೂ ಚಕಾರವೆತ್ತುವುದಿಲ್ಲ. ಅವರಿಂದ ನಮಗೆ ರೋಗಗಳೇ ಕೊಡುಗೆಯೇ ಹೊರತು ಬೇರೆ ಉಪಯೋಗವೇ ಇಲ್ಲ. ನನ್ನನ್ನು ಈ ಕಸುಬಿಗೆ ನೂಕಲು ಹವಣಿಸುತ್ತಿದ್ದಾರೆ". ಹೇಗೆ ಈ ಹೆಣ್ಣು ಮಗುವಿಗೆ ಬಿಡುಗಡೆ ಕೊಡಿಸುವುದು? ಇದು ಒಬ್ಬಳಿಂದ ಸಾಧ್ಯವೇ ಎಂಬುದು ನನ್ನ ಮುಂದಿರುವ ಪ್ರಶ್ನೆ.

## ದೃಶ್ಯ 19

ಇವಳು ಸೌಭಾಗ್ಯ. ಕಛೇರಿಯೊಂದರಲ್ಲಿ ದುಡಿಯುತ್ತಾಳೆ. ಬುದ್ಧಿವಂತೆ, ಕೆಲಸದಲ್ಲಿ ತುಂಬಾ ಆಸಕ್ತಿ. ಎಲ್ಲಾ ಕೆಲಸಗಳನ್ನು ತುಂಬಾ ಶಿಸ್ತಿನಿಂದ ಆಸ್ಥೆ ವಹಿಸಿ ಮಾಡುತ್ತಾಳೆ. ಇದರ ಬಗ್ಗೆ ಹಿರಿಯ ಅಧಿಕಾರಿಗಳಿಗೆ ತುಂಬಾ ಮೆಚ್ಚುಗೆ ಇದೆ. ಹಾಗಾಗಿ ಅವಳಿಗೇ ಹೆಚ್ಚು ಕೆಲಸ ಹೇಳುತ್ತಾರೆ. ಇದನ್ನು ಸಹೋದ್ಯೋಗಿಗಳು ಸಹಿಸರು. ಅವಳ ಬಗ್ಗೆ ತುಂಬಾ ಕೆಟ್ಟದಾಗಿ ಮಾತನಾಡಿಕೊಳ್ಳುತ್ತಾರೆ. ಅವಳಿಗೂ ಅಧಿಕಾರಿಗಳಿಗೂ ಸಂಬಂಧ ಕಲ್ಪಿಸುತ್ತಾರೆ. ಮನಸ್ಸಿನಲ್ಲೇ ನೋವು ಅನುಭವಿಸುತ್ತಾಳೆ. ಒಮ್ಮೊಮ್ಮೆ ಅದನ್ನು ಮತ್ತೊಬ್ಬ ಸಹೋದ್ಯೋಗಿ ರಮೇಶ್ ಬಳಿ ಹೇಳಿಕೊಂಡು ಮನಸ್ಸು ಹಗುರ ಮಾಡಿಕೊಳ್ಳುತ್ತಾಳೆ. ಇದರಿಂದ ಅವಳು ಮತ್ತೂ ಟೀಕೆಗೊಳಗಾಗುತ್ತಾಳೆ. ಹೇಗೆ ನಡೆದುಕೊಂಡರೂ ಹೆಜ್ಜೆ ಹೆಜ್ಜೆಗೂ ತಪ್ಪು ಹುಡುಕುತ್ತಾರೆ. ಬೇರೆ ಪುರುಷರೊಂದಿಗೆ ಮಾತನಾಡುವುದು ಅವರ ದೃಷ್ಟಿಯಲ್ಲಿ ಅಪರಾಧ. ಮತ್ತೆ ಜೊತೆಯಲ್ಲಿಯೇ ಕೆಲಸ ಮಾಡುವ ಮಹಿಳೆಯರೂ ಕೂಡಾ ಟೀಕೆಮಾಡುವುದರಲ್ಲಿ ಹಿಂದೆ ಬಿದ್ದಿಲ್ಲ. ಬಹಳ ಹಿಂದೆಯೇ ರಾಮ ಮನೋಹರ ಲೋಹಿಯಾ ಹೇಳಿದ್ದರು "ಪ್ರಪಂಚ ಎಷ್ಟು ಕ್ರೂರಿಯಾಗಿದೆ, ಹೆಣ್ಣು ಮಕ್ಕಳು ಇನ್ನೂ ಕ್ರೂರಿಗಳಾಗುವ ಸಂಭವ ಇದೆ. ಅವಿವಾಹಿತೆಯರು ಬೇರೆ ಗಂಡಸರೊಂದಿಗೆ ತಿರುಗಾಡುವುದನ್ನು ಕಂಡ ವಿವಾಹಿತ ಸ್ತ್ರೀಯರು ಎಷ್ಟು ಬಗೆಯಾಗಿ ಆಡಿಕೊಳ್ಳುತ್ತಿದ್ದಾರೆ. ಇದನ್ನು ನೋಡಿದರೆ ಎಷ್ಟು ಕೆಡುಕೆನಿಸುತ್ತದೆ. ಇಂತಹ ಮನಸ್ಸುಗಳಿರುವಾಗ ಸ್ತ್ರೀಪುರುಷ ಸಂಬಂಧ ಎಂದೂ ಪಾವಿತ್ರ್ಯತೆಯನ್ನು ಉಳಿಸಿಕೊಳ್ಳಲಾರರು.



06197
HEALTH ... LIBRARY AND ... TATION

ಈ ಮಾತೆಲ್ಲವೂ ನಮ್ಮ ಮುಂದಿರುವ ಸತ್ಯ. ಹೆಣ್ಣು ಅನೇಕ ಅನ್ಯಾಯಗಳ ವಿರುದ್ಧ ಕ್ರೂರಿಯಾಗಬೇಕಾಗಿದೆ. ಜೀವನ ಅವಳು ಹಾಗಾಗುವಂತೆ ಮಾಡಿದೆ.

## ದೃಶ್ಯ 20

ಇದು ನೋಡಿ, ಈ ಮನೆಯ ಬಾಗಿಲಲ್ಲಿ ಕುಳಿತು ಕೆಮ್ಮುತ್ತಿರುವ ಹೆಂಗಸು ಯಾರು ಗೊತ್ತೆ? ಈಕೆ ಅಮೀನಾಬಿ. ಅವಳ ಕಾಯಿಲೆ ದಿನೇ ದಿನೇ ಹೆಚ್ಚುತ್ತಾ ಹೋಗುತ್ತಿದೆ. ಆಸ್ಪತ್ರೆಗೆ ಹೋಗಲು ಉದಾಸೀನ. ಬಡತನ ಬೇರೆ ಕಾಡುತ್ತಿದೆ. ಮನೆ ಗಂಡಸರೂ ಇದರ ಕಡೆ ಗಮನ ಹರಿಸುತ್ತಿಲ್ಲ. ಇದನ್ನು ಗಮನಿಸಿದ ಪಕ್ಕದ ಮನೆ ರಾಮು ಒಂದು ದಿನ ಅಮೀನಾಬಿಯನ್ನು ಬಲವಂತ ಮಾಡಿ ಆಸ್ಪತ್ರೆಗ ಕರೆದೊಯ್ದು. ಡಾಕ್ಟರ್, ನಿಮಗೆ ಕೆಮ್ಮಾಗಿರುವುದು ಬೀಡಿ ಸಿಗರೇಟಿನ ಹೊಗೆಯಿಂದ ಎಂದು ತೀರ್ಮಾನ ಹೇಳಿದರು. ಅಮೀನಾಬಿ, ರಾಮು ಆಶ್ಚರ್ಯಚಕಿತರಾದರು. ಇದು ಹೇಗೆ ಸಾಧ್ಯ? ನೀವು ನಿರಂತರವಾಗಿ ಬೀಡಿ ಸಿಗರೇಟು ಸೇದುವವರೊಂದಿಗೆ ವಾಸ ಮಾಡುತ್ತಿರುವುದರಿಂದ ನಿಮಗೆ ಇದು ತಪ್ಪಿದ್ದಲ್ಲ". ಡಾಕ್ಟರ್ ಮುಂದುವರಿಸಿದರು. ಅಲ್ಲದೆ, ಪ್ರತಿದಿನ ಒಲೆ ಮುಂದೆ ಕುಳಿತು ಅಡುಗೆ ಮಾಡುವುದರಿಂದಲೂ ಕೆಮ್ಮು ಬರುತ್ತದೆ. ಹೊಗೆ ಸೇವಿಸುವುದು ಆರೋಗ್ಯಕ್ಕೆ ಮಾರಕ, ಒಂದು ದಿನ ಒಲೆ ಮುಂದೆ ಕುಳಿತು ಅಡಿಗೆ ಮಾಡಿದರೆ ಇಪ್ಪತ್ತು ಪೆಟ್ಟಿಗೆ ಸಿಗರೇಟು ಸೇದಿದಂತೆ" ಎಂದು ಹೇಳುತ್ತಾ ಹೋದರು.

ಅಮೀನಾಬಿ ನಿರುತ್ತರಳಾದಳು. ಗಂಡನ ನಡತೆಯಲ್ಲಿ ಬದಲಾವಣೆ ತರುವುದು ತನ್ನಿಂದ ಸಾಧ್ಯವೇ ಎಂದು ಯೋಚಿಸತೊಡಗಿದಳು. ಡಾಕ್ಟರ್ ಸಲಹೆ ಪಡೆದು ರಾಮುವಿನೊಡನೆ ಮನೆಗೆ ಹಿಂತಿರುಗಿದಳು. ರಾಮು ಮನಸ್ಸಿನಲ್ಲೇ ಲೆಕ್ಕ ಹಾಕಿದ, "ಗಂಡಸರ ದುಶ್ಚಟ ಹೆಣ್ಣಿನ ಆರೋಗ್ಯಕ್ಕೆ ಮಾರಕವಾಗಿರುವುದು ಎಷ್ಟು ವಿಚಿತ್ರ. ನಮ್ಮ ಭಾರತದಲ್ಲಿ ನೂರಕ್ಕೆ ನೂರು ಗಂಡಸರೇ ಈ ದುಶ್ಚಟಕ್ಕೆ ಬಲಿಯಾಗಿರುವುದು. ಹೆಂಗಸಿನ ದುಶ್ಚಟದಿಂದ ಗಂಡಸಿನ ಆರೋಗ್ಯ ಕೆಟ್ಟ ಉದಾಹರಣೆಗಳು ಬಹಳ ವಿರಳ.

## ದೃಶ್ಯ 21

ಇವನು ನನ್ನ ಸ್ನೇಹಿತ ರಾಜು. ಆ ದಿನ ರಾಜುವಿನ ಅಕ್ಕ ಊರಿನಿಂದ ಬಂದಿದ್ದರು. ಅವರು ದೂರದ ಊರಿನಲ್ಲಿ ಬ್ಯಾಂಕೊಂದರಲ್ಲಿ ಉದ್ಯೋಗಿ. ಅಲ್ಲದೆ ಸ್ತ್ರೀವಾದಿ ವೇದಿಕೆಯ ಕಾರ್ಯಕರ್ತೆ. ಬಂದವರೇ ರಾಜುವಿನ ವಿದ್ಯಾಭ್ಯಾಸದ ಬಗ್ಗೆ ವಿಚಾರಿಸಿದರು. ಅಕ್ಕ ಬಂದ ಸಂತೋಷದಲ್ಲಿ ರಾಜು ಆದಿನ ಸಂಜೆ ತಿರುಗಾಟಕ್ಕೆ ಹೋಗದೆ ಮನೆಯಲ್ಲಿಯೇ ಉಳಿದ. ಅಕ್ಕ ಆರಾಮವಾಗಿ ಕುಳಿತಿದ್ದರು. ರಾಜು ತನ್ನ ಕಾಲೇಜಿನ ವಿಷಯ, ಸ್ನೇಹಿತರ ವಿಷಯ, ಅದೂ ಇದೂ ಮಾತನಾಡಿದ. ಅಕ್ಕ ಹೇಳಿದ್ದಳು "ರಾಜೂ, ಇತ್ತೀಚೆಗೆ ಪೇಪರ್‌ನಲ್ಲಿ ಸ್ತ್ರೀಯರಿಗೆ ಅವಮಾನವಾಗುವಂತೆ ಒಂದು ಸುದ್ದಿ ಬಂದಿತ್ತು. ಓದಿದೆಯಾ? "ಇಲ್ಲವಲ್ಲಾ" ಎಂದ ರಾಜು. "ಪುರಿಯ ಶಂಕರಾಚಾರ್ಯ ಪೀಠದ ಬಗ್ಗೆ ಗೊತ್ತಾ" ಎಂದರು. "ಗೊತ್ತು" ಎಂದ. ಈ ಪೀಠ ಆಗಾಗ ಸುದ್ದಿ ಮಾಡುತ್ತಿರುತ್ತದೆ. ಈ ಪೀಠದ

ಸ್ವಾಮಿ ನಿಶ್ಚಯಾನಂದ ಸರಸ್ವತಿಗಳು ಇತ್ತೀಚೆಗೆ ಕೆಲವು ನುಡಿ ಮುತ್ತುಗಳನ್ನು ಉದುರಿಸಿದ್ದಾರೆ ಎಂದರು ಅಕ್ಕ. "ಏನದು?" ಎಂದ ರಾಜು. ಅಕ್ಕ ಮುಂದುವರಿಸಿದರು "ಮಹಿಳೆಯರು ವೇದ ಪಠಣ ಮಾಡಲು ಅನರ್ಹರೆಂದು ಅಪ್ಪಣೆ ಕೊಡಿಸಿದ್ದಾರೆ. ಡಾ.ಅರುಂಧತಿ ರಾಯ್ ಚೌಧರಿ ಅವರು ಸಾರ್ವಜನಿಕ ಸಮಾರಂಭದಲ್ಲಿ ವೇದ ಪಠಣ ಮಾಡುತ್ತಿದ್ದರು. ಇದು ಕಲ್ಕತ್ತೆಯಲ್ಲಿ ಶಾರದಾ ದೇವಿ ಆಶ್ರಮದ ಶತಮಾನೋತ್ಸವ ಸಮಾರಂಭದಲ್ಲಿ ನಡೆದದ್ದು. ರಾಜು ಹೇಳಿದ ಅಕ್ಕಾ ಇಂತಹ ಸ್ವಾಮಿಜಿಗಳು ಸಮಾಜ ಸೇವೆಯ ಹೆಸರಿನಲ್ಲಿ ಜನರನ್ನು ಮೋಸಗೊಳಿಸಿದ್ದು ಸಾಲದೆಂಬಂತೆ ಹೆಣ್ಣು ಮಕ್ಕಳ ಬಗ್ಗೆ ಈ ಅಭಿಪ್ರಾಯ ಹೊಂದಿದ್ದಾರಾ?. ಅಕ್ಕ ರಾಜು ಇಷ್ಟೇ ಅಲ್ಲ ಇದೇ ಪೀಠ ಪರಿಜನರನ್ನು ಬಹಿರಂಗವಾಗಿ ಅವಮಾನಿಸಿರುವುದಲ್ಲದೆ ಸತೀ ಪದ್ಧತಿಯನ್ನು ಪ್ರೋತ್ಸಾಹಿಸಿದೆ ಎಂದರು. ರಾಜು ಮನಸ್ಸಿನಲ್ಲೇ ಚಿಂತಿಸಿದ, "ಹೆಣ್ಣು ಮಕ್ಕಳ ಉದ್ಧಾರಕ್ಕೆಂದು ಸ್ಥಾಪಿತವಾಗಿರುವ ಪೀಠ ಎಲ್ಲಾದರೂ ಇದೆಯೇ?".

## ದೃಶ್ಯ 22

ನಗರದ ಒಂದು ಬೀದಿ. ಅಲ್ಲಲ್ಲೇ ಬೀದಿಯ ಪಕ್ಕದಲ್ಲಿ ಸಣ್ಣ ಸಣ್ಣ ಅಂಗಡಿಗಳನ್ನಿಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದಾರೆ. ಸಂಜೆ ಹೊತ್ತು ವ್ಯಾಪಾರ ಜೋರಾಗಿ ನಡೆಯುತ್ತಿದೆ. ಇದ್ದಕ್ಕಿದ್ದಂತೆ ಇಬ್ಬರು ವ್ಯಾಪಾರಿಗಳ ನಡುವೆ ಜಗಳ ಪ್ರಾರಂಭವಾಯಿತು. ಮಾತೆತ್ತಿದರೆ ಒಬ್ಬನು ಇನ್ನೊಬ್ಬನನ್ನು "ನಿನ್ನ ಅಮ್ಮನ್" "ನಿಮ್ಮ ಅಪ್ಪನ್" ಎಂದು ಬಯ್ಯುತ್ತಿದ್ದ. ತರಕಾರಿ ಕೊಳ್ಳಲು ಬಂದಿದ್ದ ಸುಧಾಳಿಗೆ ಅನ್ನಿಸಿತು "ಇದೇನಿದು ಅಮ್ಮನ್, ಅಪ್ಪನ್ ಎಂದು ಬಯ್ಯುತ್ತಿದ್ದಾರಲ್ಲಾ, ಇದು ತಾಯಿಯ ನಿಂದನೆಯಲ್ಲವೇ?" ಅವಳಿಗೆ ಇನ್ನೂ ಕೆಲವು ಬೈಗುಳಗಳು ನೆನಪಿಗೆ ಬಂದವು. "ಬೋಳಿ ಮಗ, ಸೂಳೆ ಮಗ, ಮುಂಡೇ ಮಗ" ಓಹೆ ಹೌದಲ್ಲವಾ ಇದೆಲ್ಲದರಲ್ಲೂ ಇಂಥವಳ ಮಗ ಎನ್ನುವುದಕ್ಕೆ ಒತ್ತು ಕೊಡಲಾಗಿದೆಯೇ ವಿನಃ ಮಗನನ್ನು ಪ್ರಮುಖವಾಗಿ ಪ್ರತಿನಿಧಿಸಲಾಗಿಲ್ಲ. "ನಿನ್ನ ಅಪ್ಪನ್" ಎಂಬ ಬೈಗುಳ ಇಲ್ಲ ಎಂಬುದರ ಬಗ್ಗೆ ಯೋಚಿಸುತ್ತಾ ಸುಧಾ ಮನೆಗೆ ನಡೆದಳು.

## ದೃಶ್ಯ 23

ಇದೊಂದು ತುಮಕೂರು ಜಿಲ್ಲೆಯ ಒಂದು ತಾಲೂಕಿಗೆ ಸೇರಿದ ಗೊಲ್ಲರಹಟ್ಟಿ. ಊರ ಹೊರಗೆ ಅಲ್ಲಲ್ಲಾ ಸಣ್ಣ ಸಣ್ಣ ಗುಡಿಸಲುಗಳನ್ನು ಹಾಕಿದ್ದಾರೆ. ಇವು ಏತಕ್ಕೆ ಗೊತ್ತೆ? ತಮ್ಮ ಹಳ್ಳಿಯ ಹೆಣ್ಣು ಮಕ್ಕಳು ಹೊರಗಾದಾಗ ಮತ್ತು ಅವರಿಗೆ ಹೆರಿಗೆ ಆದಾಗ ಸೂತಕ ಎಂದು ಅವಳನ್ನು ಊರ ಹೊರಗೆ ಬಿಡುತ್ತಾರೆ. ಆಗ ಅವರು ಈ ಗುಡಿಸಲುಗಳಲ್ಲಿ ದಿನಗಟ್ಟಲೆ ಇರಬೇಕಾಗುತ್ತದೆ. ರಾತ್ರಿ ಪಗಲುಗಳಿಗೆ ವ್ಯತ್ಯಾಸವಿಲ್ಲ. ಅವರು ರಾತ್ರಿಗಳನ್ನು ಅಲ್ಲಿಯೇ ಕಳೆಯಬೇಕು. ಛಳಿ, ಮಳೆ, ಕ್ರೂರ ಪ್ರಾಣಿ ಯಾವುದಕ್ಕೂ ಅವರೇ ಪ್ರತಿಕ್ರಿಯಿಸಬೇಕು. ಪ್ರಾಕೃತಿಕವಾಗಿ ನಡೆಯುವ ಮುಟ್ಟು ಮತ್ತು ಹೆರಿಗೆಯನ್ನು ಮೈಲಿಗೆ ಎಂದು ಪರಿಗಣಿಸಿ ಆಚರಿಸುತ್ತಿರುವ ಈ ಪದ್ದತಿ ಎಷ್ಟು ಕ್ರೂರ ಅಲ್ಲವೇ? ಇನ್ನೂ ಒಂದು ಏನೆಂದರೆ, ಕೆಲವು ಬಾರಿ ಊರ ಹೊರಗಿನ ಶಾಲೆಗಳಲ್ಲಿ, ಅಂಗನವಾಡಿ ಕೇಂದ್ರಗಳಲ್ಲಿ ಈ ಹೆಣ್ಣು ಮಕ್ಕಳು ತಂಗಬೇಕಾಗುತ್ತದೆ. ಈ ರೀತಿ ರಾತ್ರಿ ತಂಗಿದ ಹೆಣ್ಣು ಮಕ್ಕಳ

ಮೇಲೆ ಅತ್ಯಾಚಾರವೆಸಗುವ ಪುರುಷರಿಗೇನೂ ಕಡಿಮೆ ಇಲ್ಲವಂತೆ. ಎಂತಹ ಸಮಾಜದಲ್ಲಿ ನಾವಿನ್ನೂ ಬದುಕುತ್ತಿದ್ದೇವೆ.

## ದೃಶ್ಯ 24

ಇದೊಂದು ಯಲ್ಲಮ್ಮ ದೇವರ ಗುಡಿ. ಇದರ ಮುಂದೆ ಅಲ್ಲಲ್ಲೇ ಜನ ಗುಂಪಾಗಿ ಸೇರಿದ್ದಾರೆ. ಗುಂಪಿನಲ್ಲಿ ಹೆಚ್ಚು ಮಂದಿ ಹೆಣ್ಣು ಮಕ್ಕಳೇ ಒಂದು ಗುಂಪಿನಲ್ಲಿ 16 ವರ್ಷದ ಹೆಣ್ಣು ಮಗಳು ರೇಣುಕಾ ಮುಖ ಬಾಡಿಸಿಕೊಂಡು ಕುಳಿತಿದ್ದಾಳೆ. ಆಕೆಯ ಸುತ್ತಾ ಆಕೆಯ ನೆಂಟರಿಷ್ಟರು, ತಂದೆ, ತಾಯಿ, ಅಣ್ಣ, ಭಾವ, ಅಕ್ಕ, ಚಿಕ್ಕಮ್ಮ ದೊಡ್ಡಮ್ಮ ಎಲ್ಲಾ ಕುಳಿತಿದ್ದಾರೆ. ಅವರೆಲ್ಲಾ ಒಂದೇ ಸಮನೆ ರೇಣುಕಳನ್ನು ಬೆತ್ತಲೆ ಸೇವೆ ಮಾಡಲು ಪೀಡಿಸುತ್ತಿದ್ದಾರೆ. ಆಕೆಗೆ ನಿಜವಾಗಿಯೂ ಇಂತಹ ಕ್ರೂರವಾದ ಹರಕೆ ಇಷ್ಟವಿಲ್ಲ. ಅವರೆಲ್ಲಾ "ನಮಗೆ ಒಳ್ಳೆಯದಾಗುವುದು ಬೇಡವೇ? ನಮ್ಮ ಕಾಯಿಲೆ ಕಸಾಲೆ ಹೋಗುವುದು ಬೇಡವೇ? ನಮಗೆ ಒಳ್ಳೆಯ ಬೆಳೆ ಬರುವುದು ಬೇಡವೇ? ನಾವು ಹರಕೆ ಮಾಡಿಕೊಂಡಿದ್ದೇವೆ. ಬೇಗ ಬಟ್ಟೆ ಬಿಚ್ಚಿ ಹೊಂಡದಲ್ಲಿ ಮುಳುಗು ಹಾಕಮ್ಮಾ" ಎಂದು ಒಮ್ಮೆಲೆ ಅವಸರಿಸತೊಡಗಿದ್ದಾಳೆ. ಸರಿ, ಹೊಂಡದಲ್ಲಿ ಮುಳುಗಿಸಿಯೇಬಿಟ್ಟರು. ರೇಣುಕಾ ದೆವ್ವ ಬಡಿದವಳಂತೆ ಬಟ್ಟೆಯಲ್ಲಾ ಕಿತ್ತೆಸೆದು ಹೊಂಡದಿಂದ ಎದ್ದವಳೇ ದೇವಸ್ಥಾನ ಕಾಣುವವರೆಗೂ ಓಡತೊಡಗಿದಳು. ಉಧೋ ಉಧೋ ಎಂದವಳು ಕೂಗುತ್ತಿದ್ದ ಕೂಗು ಎಂಥವರ ಮನಸ್ಸನ್ನೂ ಕಲಕುವಂತಿತ್ತು. ಬೀದಿಯ ಪಕ್ಕದಲ್ಲಿ ನಿಂತಿದ್ದ ಸಾವಿರಾರು ಜನ ನೋಡುತ್ತಿದ್ದರು. ಕೆಲವರು ಅವಳ ಜೊತೆಯಲ್ಲಿಯೇ ಓಡುತ್ತಿದ್ದರು. ಕಾಮುಕರ ಕಣ್ಣಿಗೆ ಹಬ್ಬ ಎಣಿಸಲೆಂದೇ ನಡೆಯುವ ಈ ಜಾತ್ರೆಯಲ್ಲಿ ಹೆಣ್ಣು ಮಕ್ಕಳ ಸ್ತ್ರೀತ್ವವೇ ಹರಕೆಗೆ ತಂದ ಕುರಿ. ಬಲಿಯಾಗದೆ ಉಳಿದೀತೇ?

## ದೃಶ್ಯ 25

ಆ ದಿನ ಶಾಲೆಯಲ್ಲಿ ಶಿಕ್ಷಕರು ಪಾಠ ಪ್ರಾರಂಭಿಸಿದರು. "ಗರತಿಯ ಹಾಡು" ಪಾಠ. ತುಂಬಾ ಆಸಕ್ತಿಯಿಂದ ಎಲ್ಲರೂ ಆಲಿಸುತ್ತಿದ್ದರು. "ಬಾಲಕರಿಲ್ಲದ ಬಾಲೀದ್ಯಾತರ ಜನ್ಮ ಬಾಡಿಗಿ ಎತ್ತು ದುಡಿದಂಗ" ಎಂಬ ವಿಷಯವನ್ನು ತೆಗೆದುಕೊಂಡು ಚರ್ಚೆ ನಡೆಯುತ್ತಿತ್ತು. ಬಂಜೆ ಹೆಣ್ಣನ್ನು ಸಮಾಜ ನಡೆಸಿಕೊಂಡ ಬಗ್ಗೆ ಮಾಸ್ತರರು ವಿವರಿಸಿದರು. ಸಮಾಜ ಆಕೆಗೆ ಕೊಟ್ಟ ಕೊಡುಗೆ, ಆಕೆಯನ್ನು ಕೆಟ್ಟದಾಗಿ ನಡೆಸಿಕೊಂಡದ್ದು. ಆದರೆ ಇದೊಂದೇ ಸಮಾಜ ಆಕೆಗೆ ಕೊಟ್ಟ ಕೊಡುಗೆಯಲ್ಲ. ಅದಕ್ಕಾಗಿ ಸಾವಿರಾರು ಗಾದೆಗಳನ್ನು ಕೊಟ್ಟಿದ್ದಾರೆ. ಅವುಗಳ ಮೂಲಕ ಅವಳನ್ನು ಅವಮಾನಿಸಿದ್ದಾರೆ ಎಂದಿದ್ದಾರೆ ಎಂದು ವಿವರಿಸಿದ ಮಾಸ್ತರರು ಕೆಲವು ಗಾದೆಗಳನ್ನು ಹೇಳಿದರು.

"ಹೆಣ್ಣು ಹುಟ್ಟಿದರೆ ಹುಣ್ಣು ಹುಟ್ಟಿದಂತೆ", "ಹೆಣ್ಣುಗಳ ಬುದ್ಧಿ ಕಣಕಾಲ ಕೆಳಗೆ", "ಅಂಕೇಲಿಯೋ ಹೆಣ್ಣು ಕೆಡಲ್ಲ, ಮಜ್ಜಿಗೇಲಿರೋ ಬೆಣ್ಣೆ ಕೆಡಲ್ಲ", "ಉಕ್ಕಿದ ಮೇಲೆ ಸಾರಲ್ಲ, ಸೊಕ್ಕಿದ ಮೇಲೆ ಹೆಣ್ಣಲ್ಲ", "ಇದ್ದೊಬ್ಬ ಮಗಳು ಊರು ಬಸವಿಯಾದಳು", "ದಡಿಯಾತಕ್ಕೆ

ಮಡದೀನ ಒಡೀಲಿಕ್ಕೆ", "ಅತ್ತೆ ಸತ್ತ ಆರು ತಿಂಗಳ ನಂತರ ಸೊಸೆ ಕಣ್ಣಲ್ಲಿ ನೀರು ಬಂತು", "ಅಳೋ ಗಂಡ ನಂಬಬೇಡ, ನಗೋ ಹೆಣ್ಣ ನಂಬಬೇಡ", "ಅರಳೀಕಟ್ಟೆ ಒಂದು ಸುತ್ತು ಸುತ್ತಿ ಬಂದು ಹೊಟ್ಟೆ ಮುಟ್ಟಿ ನೋಡಿಕೊಂಡಳಂತೆ", "ಅತ್ತೂರ್ನೂ ಅವರೇ ಹುಟ್ಟಿದ್ದು", "ಹಿರಿಯಕ್ಕನ ಚಾಳಿ ಮನೆ ಮಂದಿಗೆಲ್ಲ", "ಮುಪ್ಪಿನ ಸೂಳೆಗೆ ಮುತ್ತಿಕ್ಕೋರ್‍ಯಾರು", "ಬಂಜೆ ಹೋದಲ್ಲಿ ಸಂಜೆ", "ಊಟ ಕೆಟ್ರೆ ದಿವಸ ಕೆಡ್ತು, ಹೆಂಡತಿ ಕೆಟ್ರೆ ಜನ್ಮ ಕೆಟ್ಟಿತು", ಹೀಗೆ ಹೇಳುತ್ತಾ ಹೋದರು. ವಿದ್ಯಾರ್ಥಿಗಳಿಗೆ ತಾವು ಯಾವ ಲೋಕದಲ್ಲಿದ್ದೇವೆ ಎಂದು ತಿಳಿಯದಾಯಿತು. ಪ್ರತಿದಿನವೂ ಅಮ್ಮನಿಂದ ಉಪಚಾರ ಮಾಡಿಸಿಕೊಂಡು, ಅಕ್ಕ ತಂಗಿಯರನ್ನೇ ಅವಲಂಬಿಸಿರುವ ಈ ಜೀವನದಲ್ಲಿ ಸಮಾಜ ಹೆಣ್ಣು ಮಕ್ಕಳಿಗೆ ನೀಡಿರುವ ಉಡುಗೊರೆ ಎಷ್ಟು ಅಸಹ್ಯಕರವಾಗಿದೆ ಎಂದೆನಿಸಿತು. ಶಿಕ್ಷಕರು "ಹೆಣ್ಣನ್ನು ಗೌರವಿಸಿ, ಸ್ನೇಹಿತಳಂತೆ ಕಾಣಿ" ಎಂಬ ಮಾತಿನೊಂದಿಗೆ ತರಗತಿ ಮುಗಿಯಿತು.

## ದೃಶ್ಯ 26

ರತ್ನ ಅಷ್ಟೇನೂ ಲಕ್ಷಣವಾಗಿಲ್ಲದ 25 ವರ್ಷ ದಾಟಿದ ತರುಣಿ. ಬಡ ಕುಟುಂಬದಲ್ಲಿ ಹುಟ್ಟಿದ್ದರಿಂದ ಎಸ್.ಎಸ್.ಎಲ್.ಸಿ. ನಂತರ ಓದು ಮುಂದುವರಿಸಲಾಗಲಿಲ್ಲ. ತಂದೆಯೂ ತಮ್ಮ ಗುಮಾಸ್ತ ವೃತ್ತಿಯಿಂದ ನಿವೃತ್ತರಾದರು. ಅವರು ತಮ್ಮ ಸೇವೆಯ ಅವಧಿಯಿಂದಲೂ ತಮ್ಮ ಮಗಳಿಗೆ ಗಂಡು ಹುಡುಕಿ ಹುಡುಕಿ ಸೋತರು. ಅನೇಕ ವರಗಳು ಬಂದರು, ನೋಡಿದರು, ಇವರು ಬಡಿಸಿದ ತರತರದೂಟ ಉಂಡರು, ನಂತರ ತಿಳಿಸುತ್ತೇವೆ ಎಂದು ಹೋದರು. ತಿಳಿಸಲೂ ಇಲ್ಲ, ಏನೂ ಇಲ್ಲ. ದಿನಗಳು ಉರುಳಿದವು. ರತ್ನಳ ಮದುವೆ ದೂರದ ಕನಸಾಯಿತು. ಬಂದ ಗುಡಂಗಳ ಮುಂದೆಲ್ಲಾ ಅಲಂಕಾರ ಮಾಡಿಕೊಂಡು ಕುಳಿತೂ ಕುಳಿತೂ ಈ ಹೆಣ್ಣು ಮಗಳು ನೊಂದಳು. ಆಕೆಯ ಮನಸ್ಸಿನ ನೋವು ಯಾರಿಗೆ ಅರ್ಥವಾಗಬೇಕು? ಅನೇಕ ರೀತಿ ಮಾತನಾಡಿಕೊಂಡರು ಜನ. "ರತ್ನಳಿಗೆ ಮದುವೆಯಾಗಲಿಲ್ಲ, ಇನ್ನೆಲ್ಲಿ ಆಗುತ್ತದೆ? ಬಂದ ಗಂಡುಗಳೆಲಲ್ಲಾ ಒಪ್ಪಲಿಲ್ಲ" ಹೀಗೆ. ಇವನ್ನೆಲ್ಲಾ ಕೇಳಿ ಕೇಳಿ ಆಕೆಗೆ ರೋಸಿ ಹೋಯಿತು. ಮದುವೆಯೇ ಜೀವನಕ್ಕೆ ಅರ್ಥ ಕೊಡುವುದು ಎಂದು ಬಲವಾಗಿ ನಂಬಿದ್ದ ರತ್ನ ಒಂದು ಬೆಳಿಗ್ಗೆ ಎದ್ದು ನೋಡುವಾಗ ನತ್ನ ಕೊಠಡಿಯಲ್ಲಿ ಹೆಣವಾಗಿದ್ದಳು. ತಂದೆ ತಾಯಿ ಅತ್ತು ಕರೆದರು. ಹೋದ ಜೀವ ಹಿಂತಿರುಗಿ ಬರುವುದೇ? ಯಾರನ್ನು ದೂರುವುದು. ಮದುವೆಯಾಗದ ಹೆಣ್ಣು ಮಗಳ ಜೀವಕ್ಕೆ ಬೆಲೆಯೇ ಇಲವೇ?


## ದೃಶ್ಯ 27

ಒಂದು ಕಾಲೇಜು. 300ಕ್ಕೂ ಹೆಚ್ಚು ವಿದ್ಯಾರ್ಥಿಗಳಿದ್ದಾರೆ. ಇವರಲ್ಲಿ ಶೇ. 50ಕ್ಕೂ ಹೆಚ್ಚು ಹೆಣ್ಣು ಮಕ್ಕಳು. ಪ್ರತಿ ವರ್ಷ ಫಲಿತಾಂಶದಲ್ಲಿ ಹೆಣ್ಣು ಮಕ್ಕಳದೇ ಮೇಲುಗೈ. ವಿದ್ಯಾರ್ಥಿಗಳನ್ನು ಸಾಂಸ್ಕೃತಿಕವಾಗಿ, ಸಾಹಿತ್ಯಿಕವಾಗಿ ಬೆಳೆಸಬೇಕೆಂಬುದೇ ಈಕಾಲೇಜಿನ ಪ್ರಾಶುಂಪಾಲರ ಮತ್ತು ಉಪನ್ಯಾಸಕರ ಮಹತ್ವಾಕಾಂಕ್ಷೆ. ಅಲ್ಲದೆ ವಿದ್ಯಾರ್ಥಿನಿಯರಿಗಾಗಿಯೇ ಒಂದು ವೇದಿಕೆ ಇದ್ದು,

ಅವರಲ್ಲಿನ ಕೀಳರಿಮೆ ಹೋಗಲಾಡಿಸಿ ಅವರಲ್ಲಿ ಆತ್ಮ ವಿಶ್ವಾಸ ಬೆಳೆಸಲು ಅದು ಶ್ರಮಿಸುತ್ತದೆ. ಎಲ್ಲವೂ ಸರಿ, ಊರಿನ ಸಾರ್ವಜನಿಕ ಸಮಾರಂಭಗಳಲ್ಲಿಯೂ ವಿದ್ಯಾರ್ಥಿಗಳು ಭಾಗವಹಿಸುತ್ತಾರೆ.

ಹೀಗೆ ಒಂದು ಬಾರಿ ಸ್ವತಂತ್ರೋತ್ಸವ ಸಮಾರಂಭದಲ್ಲಿ ಈ ಕಾಲೇಜಿನ ವಿದ್ಯಾರ್ಥಿಗಳು ಪಥ ಸಂಚಲನದಲ್ಲಿ ಭಾಗವಹಿಸಬೇಕಾಗಿತ್ತು. ಅದಕ್ಕಾಗಿ ವಿದ್ಯಾರ್ಥಿ ವಿದ್ಯಾರ್ಥಿನಿಯರೆಲ್ಲರೂ ಕೂಡಿ ಅಭ್ಯಾಸ ನಡೆಸುತ್ತಿದ್ದರು. ಪ್ರಾಶುಂಪಾಲರೇ ಖುದ್ದಾಗಿ ಇದರ ಮೇಲ್ವಿಚಾರಣೆ ನಡೆಸಿದ್ದರು. ಎಲ್ಲರೂ ಚೆನ್ನಾಗಿ ಅಭ್ಯಾಸ ಮಾಡುತ್ತಿದ್ದರು. ವಿದ್ಯಾರ್ಥಿನಿಯರು ತುಂಬಾ ಆಸ್ಥೆ ವಹಿಸಿ, ಶಿಸ್ತಿನಿಂದ ಅಭ್ಯಾಸದಲ್ಲಿ ಪಾಲ್ಗೊಂಡಿದ್ದರು. ಅಭ್ಯಾಸ ಮುಗಿಸಿ ಇನ್ನೇನು ನಾಳೆ ಪಥ ಸಂಚಲನಕ್ಕೆ ಹೋಗಬೇಕು, ಆ ದಿನ ಪ್ರಾಶುಂಪಾಲರು "ವಿದ್ಯಾರ್ಥಿನಿಯರನ್ನು ಮುಂದೆ ನಿಲ್ಲಿಸೋಣ, ಅವರು ಚೆನ್ನಾಗಿ ಮಾಡುತ್ತಾರೆ" ಎಂದರು. ವಿದ್ಯಾರ್ಥಿಗಳು ಸುತಾರಾಂ ಒಪ್ಪಲಿಲ್ಲ, "ನಾವು ಎಂದೂ ಹಿಂದೆ ನಿಂತವರಲ, ಈಗಲೂ ನಾವೇ ಮುಂದೆ ನಿಲ್ಲುತ್ತೇವೆ. ಅವರೇ ಹಿಂದೆ ನಿಲ್ಲಲಿ ಎಂದು ಪಟ್ಟು ಹಿಡಿದರು. ವಿದ್ಯಾರ್ಥಿನಿಯರೂ ಪ್ರಾಶುಂಪಾಲರು ಹೇಳಿದ್ದೇ ಸರಿ ಎಂದರು. ಆದರೆ ಹುಡುಗರಂತೆ ಪಟ್ಟು ಹಿಡಿಯಲಿಲ್ಲ. ಪ್ರಾಂಶುಪಾಲರಿಗೆ ವಿದ್ಯಾರ್ಥಿಗಳ ಅಭಿಪ್ರಾಯ ಕಡೆಗಣಿಸಲಾಗಲಿಲ್ಲ. ಅವರನ್ನೇ ಮುಂದೆ ನಿಲ್ಲಿಸಲು ಒಪ್ಪಿದರು. ವಿದ್ಯಾರ್ಥಿನಿಯರೆಲ್ಲರೂ ಒಟ್ಟಾಗಿ ಹಠ ಮಾಡಿದ್ದರೆ ಇದನ್ನು ಸಾಧಿಸಬಹುದಾಗಿತ್ತೇನೋ? ಹಿಂದೆ ನಿಂತಲೂ ಹುಡುಗಿಯರೇ ಒಳ್ಳೆ ಪ್ರದರ್ಶನ ನೀಡಿದರೆಂಬ ಕೀರ್ತಿಗೆ ಪಾತ್ರರಾದರು. ಹೆಣ್ಣು ಮಕ್ಕಳ ಪ್ರತಿಭೆಯನ್ನು ಸಮಾಜ ಗುರುತಿಸುತ್ತಿಲ್ಲ. ಅವರೇ ಒಟ್ಟಾಗಿ ಇದನ್ನು ಪ್ರಕಾಶಿಸಲು ಮುಂದೆ ಬರುವುದೇ ಅವಗಿರುವ ದಾರಿ.

ದೃಶ್ಯ 28



ಇವಳು ಅನಸೂಯ. ಗೃಹಿಣಿ. ಎರಡು ಮಕ್ಕಳ ತಾಯಿ. ಗಂಡ ಮಕ್ಕಳನ್ನು ತುಂಬಾ ಚೆನ್ನಾಗಿ ನೋಡಿಕೊಳ್ಳುತ್ತಾಳೆ. ಮನೆ ಮಂದಿಗೆಲ್ಲಾ ರುಚಿ ರುಚಿಯಾಗಿ ಅಡಿಗೆ ಮಾಡಿ ಹಾಕುತ್ತಿದ್ದಾಳೆ. ಎಲ್ಲರೂ ಮೆಚ್ಚುಗೆ ವ್ಯಕ್ತಪಡಿಸಿದ್ದೂ ಪಡಿಸಿದ್ದೇ. ಆದರೆ ಮನೆಯ ಆಗು ಹೋಗುಗಳ ಬಗ್ಗೆ ಇವಳ ಅಭಿಪ್ರಾಯ ಕೇಳುವವರಾರೂ ಇಲ್ಲ. ಎಲ್ಲಾ ತೀರ್ಮಾನ ಮಾಡುವವನು ಗಂಡ ಮತ್ತು ಮನೆಯ ಗಂಡಸರು. ಇವಳು ಮನೆಯಲ್ಲಿ ದುಡಿಯುವ ಆಳು ಅಷ್ಟೇ. ಬೇರೆ ವಿಷಯಗಳಲ್ಲಿ ಅವಳು ಆಸಕ್ತಿವಹಿಸಿದವಳೇ ಅಲ್ಲ. ಅವಳ ಬೇಡಿಕೆಗಳಾದ ಸೀರೆ, ಒಡವೆ ಕೊಡಿಸಿದರಾಯಿತು. ತುಂಬಾ ಸಂತೋಷಪಡುತ್ತಾಳೆ. ಮನೆಯಲ್ಲಿ ಅನೇಕ ವೃತ್ತ ಪತ್ರಿಕೆಗಳು ಬರುತ್ತವೆ. ಇವಳು ಅದನ್ನು ಎಂದೂ ಓದುವುದಿಲ್ಲ. ಟಿವಿ, ಸಿನಿಮಾ ಇಷ್ಟೇ ಅವಳ ಪ್ರಪಂಚ. ಈ ಪ್ರಪಂಚದ ಕೂಪ ಮಂಡೂಕ

ಅವಳು. ಇವಳ ಬದುಕು ಇಷ್ಟಕ್ಕೇ ಸೀಮಿತವಾಗಿರಬೇಕೆ? ಸಮಾಜದ ಆಗು ಹೋಗುಗಳ ಬಗ್ಗೆ ಅವಳಿಗೆ ತಿಳುವಳಿಕೆ ಬೇಡವೇ? ಈ ಸಮಾಜಕ್ಕೆ ಅವಳ ಕೊಡುಗೆ ಬೇಡವೇ?

## ದೃಶ್ಯ 29

ನಿರ್ಮಲಾ ಅಣ್ಣಂದಿರೊಂದಿಗೆ ಬೆಳೆದವಳು. ಬಿಎವರೆಗೂ ಓದಿದಳು. ಶ್ರೀಮಂತ ಕುಟುಂಬ. ಆಕೆಯ ವಿದ್ಯಾಭ್ಯಾಸಕ್ಕೆ ತುಂಬಾ ಪ್ರೋತ್ಸಾಹ ಕೊಡುವ ತಂದೆ ಅಣ್ಣಂದಿರು. ಬಿಎ ನಂತರ ಓದು ಎಂದರೆ "ಬೇಡ, ಇಷ್ಟೇ ಸಾಕು" ಎಂದು ಮನೆಯಲ್ಲಿಯೇ ಉಳಿದಳು. ಹೋಗಲಿ "ಕೆಲಸಕ್ಕೆ ಅರ್ಜಿ ಹಾಕು" ಎಂದರೆ "ಬೇಡಪ್ಪಾ ನನ್ನ ಕೈಲಾಗಲ್ಲ, ನಾನು ಕೆಲಸಕ್ಕೆ ಹೋಗಲ್ಲ" ಎಂದಳು. ಹಿಂಜರಿಕೆ ಅವಳ ಹುಟ್ಟು ಗುಣ. ಮುನ್ನುಗ್ಗಿ ಎಂದೂ ಹೋದವಳಲ್ಲ. ಮದುವೆಯಾಯಿತು. ಗಂಡನೂ ವಿದ್ಯಾಭ್ಯಾಸ ಮುಂದುವರಿಸಲು, ಕೆಲಸಕ್ಕೆ ಹೋಗಲು ಪ್ರೋತ್ಸಾಹಿಸಿದ. 'ಬಿಲ್‌ಕುಲ್ ಬೇಡ" ಮನೆಯಲ್ಲಿಯೇ ಇರುತ್ತೇನೆ ಎಂದಳು. ಸರಿ ಅವಳೂ ಕೂಡಾ ಕೋಟ್ಯಾಂತರ ಮಹಿಳೆಯರಂತೆ ಮನೆ ಕೆಲಸಕ್ಕೆ ಗಂಡ ಮಕ್ಕಳ ಸೇವೆಗೆ ಮುಡುಪಾದಳು. ಬಹುಶಃ ಹೆಂಗಸಿನ ಹಿಂಜರಿಕೆಯೇ ಗಂಡಸು ಆಕೆಯ ಅನೇಕ ಅವಕಾಶಗಳನ್ನು ಕಿತ್ತುಕೊಳ್ಳುವಂತೆ ಮಾಡಿರಬೇಕು ಅಲ್ಲವೇ?

## ದೃಶ್ಯ 30

ಬಿಹಾರದ ಖತಿಹಾರ್ ಜಿಲ್ಲೆಯ ಒಂದು ಹಳ್ಳಿಯ ಮನೆ. ಇಲ್ಲಿ ಖಿನ್ನಳಾಗಿ ಕುಳಿತಿರುವ ಹೆಣ್ಣು ಸರೋಜ. ಇವಳ ದುಃಖಕ್ಕೆ ಕಾರಣವೇನು ಗೊತ್ತೆ? 1985ರಲ್ಲಿ ಸರೋಜಳಿಗೆ ಹೆಣ್ಣು ಮಗುವಾಯಿತು. ಆಗ ಅವಳು ಮತ್ತು ಅವಳ ಗಂಡ ಸಂಭ್ರಮದಿಂದ ಮೊದಲ ಮಗುವಿನ ಹುಟ್ಟುಹಬ್ಬವನ್ನು ಆಚರಿಸಿದರು. ಮೂರು ವರ್ಷದ ಬಳಿಕ ಮತ್ತೊಂದು ಹೆಣ್ಣು ಮಗು ಜನಿಸಿತು. ಈಗ ಗಂಡನ ಮನೋಭಾವವೇ ಬದಲಾಯಿತು. ಹೆರಿಗೆ ಮಾಡಿಸಿದ ಮಿಡ್‌ವೈಫ್ ಅನ್ನು ಕರೆದು ಮಗುವನ್ನು ಕೊಲ್ಲಲು ಹೇಳಿದ. ಸರೋಜ ಪ್ರತಿಭಟಿಸಿದಳು. ಪರಿಣಾಮವಾಗಿ ಗಂಡನ ಹೊಡೆತ ತಿಂದಳು. ಮತ್ತೇನೂ ಪ್ರಯೋಜನವಾಗಲಿಲ್ಲ. ಇದು ಕೇವಲ ಸರೋಜಳ ಕಥೆಯಲ್ಲ. ಬಿಹಾರದ ಅನೇಕ ಜಿಲ್ಲೆಗಳಲ್ಲಿ ಹೆಣ್ಣು ಮಕ್ಕಳನ್ನು ಹಡೆದ ತಾಯಿಯರ ಕಥೆ. ಈ ಜಿಲ್ಲೆಯಲ್ಲಿ ಆಸ್ಪತ್ರೆಯಲ್ಲಿ ಹೆಣ್ಣು ಮಕ್ಕಳು ಜನಿಸಿದ ತಕ್ಷಣ ಮಿಡ್‌ವೈಫ್‌ಗಳೇ "ಮಗುವನ್ನು ಕೊಲ್ಲಲೇ?" ಎಂದು ಕೇಳುತ್ತಾರೆ. ಇವರು ಒಂದು ಹೆಣ್ಣು ಮಗುವನ್ನು ಸಾಯಿಸಲು ಪಡೆಯಲುವ ಹಣ ಕೇವಲ 100 ರಿಂದ 150 ರೂಪಾಯಿ. ಒಂದು ತಿಂಗಳಿಗೆ 3-4 ಹೆಣ್ಣು ಮಕ್ಕಳನ್ನು ಇವರು ಕೊಲ್ಲುತ್ತಾರಂತೆ. ತಾನು ಹೆಚ್ಚುಕೊಲ್ಲಬೇಕು, ತಾನು ಹೆಚ್ಚು ಹಣ ಗಳಿಸಬೇಕು ಎಂದು ಮಿಡ್‌ವೈಫ್‌ಗಳು ಪೈಪೋಟಿ ಮಾಡುತ್ತಾರಂತೆ. ಪ್ರಪಂಚದ ಕೆಲವು ಭಾಗಗಳಲ್ಲಿ ಆಗ ತಾನೇ ಹುಟ್ಟಿದ ಹೆಣ್ಣು ಮಗುವಿನ ಬಾಯಿಗೆ ಭತ್ತ ತುರುಕಿ ಸಾಯಿಸಿದರೆ, ಮತ್ತೆ ಕೆಲವು ಕಡೆ ಕತ್ತು ತಿರುಚುತ್ತಾರಂತೆ, ಚರಂಡಿಗೆ ಎಸೆಯುತ್ತಾರಂತೆ. ಇಲ್ಲಿ ಹೊಟ್ಟೆಪಾಡಿಗೆ ಮಕ್ಕಳನ್ನು ಸಾಯಿಸುವ ಮಿಡ್‌ವೈಫ್‌ಗಳನ್ನು ದೂರಬೇಕೋ, ಇಲ್ಲ ಇವರಿಂದ ಈ ಕೆಲಸ ಮಾಡಿಸಿದ ಸಮಾಜವನ್ನು ದೂರಬೇಕೋ?


ಸ್ನೇಹಿತರೇ, ಇದುವರೆಗೆ ನೀವು ಅನೇಕ ದೃಶ್ಯಗಳನ್ನು ನೋಡುತ್ತಾ ಬಂದಿರಿ. ನೀವೂ ಕೂಡಾ ನಿಮ್ಮ ನಿತ್ಯ ಜೀವನದಲ್ಲಿ ಇಂತಹ ನೂರಾರು ದೃಶ್ಯಗಳನ್ನು ಕಂಡಿರಬಹುದು. ಇಲ್ಲಿ ಕೊಟ್ಟಿರುವ ದೃಶ್ಯಗಳು ಕೇವಲ ಸಾಂಕೇತಿಕ. ಹೆಣ್ಣು ಮಕ್ಕಳು ನಿರಂತರವಾಗಿ ಅನುಭವಿಸುತ್ತಿರುವ ನೋವು, ಶೋಷಣೆ, ಅನ್ಯಾಯ ಒಂದೊಂದು ದೃಶ್ಯದಲ್ಲಿಯೂ ಪ್ರತಿಬಿಂಬಿಸಿದೆ. ಕೆಲವು ದೃಶ್ಯಗಳಲ್ಲಿ ಹೆಣ್ಣಿನಲ್ಲಿ ಕೀಳರಿಮೆ, ಅಳುಕು ಸ್ವಭಾವ ವ್ಯಕ್ತವಾಗಿದೆ. ಇವೆಲ್ಲವೂ ಸತ್ಯ ಘಟನೆಗಳು. ಯಾವುದೂ ಕಲ್ಪಿತವಲ್ಲ, ಇಲ್ಲಿ ಬಹುಪಾಲು ದೃಶ್ಯಗಳಲ್ಲಿ ಗಂಡು ನೋವು ಅನುಭವಿಸಿರುವುದು ಕಡಿಮೆ.

ಅಲ್ಲದೆ, ಹೆಣ್ಣು ಜಿಲ್ಲಾಧಿಕಾರಿಯಂತಹ ಹುದ್ದೆಗಳನ್ನು ಅಲಂಕರಿಸಿರುವುದಿದೆ. ಅವರು ಪ್ರಧಾನ ಮಂತ್ರಿಯಾಗಿ, ಸಚಿವರಾಗಿ, ಉಪ ಕುಲಪತಿಗಳಾಗಿ, ಮುಖ್ಯಮಂತ್ರಿಗಳಾಗಿ ಕೆಲಸ ಮಾಡುತ್ತಿದ್ದಾರೆ. ಅತ್ಯಂತ ಕ್ಲಿಷ್ಟ ಎನಿಸಬಹುದಾದ ಸೈನ್ಯ, ವಾಯುಪಡೆಗಳಂತಹ ಕೆಲಸದಲ್ಲಿ ತೊಡಗಿದ್ದಾರೆ. ಇಲ್ಲಂತೂ ಗಂಡು ಹೆಣ್ಣು ಭೇದ ಕಾಣಿಸದು. ಆದರೆ ಯಾರೋ ಒಬ್ಬರು ಜಿಲ್ಲಾಧಿಕಾರಿಯಾದರೆ, ಸಚಿವರಾದರೆ, ಮುಖ್ಯಮಂತ್ರಿಯಾದರೆ, ಅವರು ಇಡೀ ಹೆಣ್ಣು ಕುಲವನ್ನು ಪ್ರತಿನಿಧಿಸುತ್ತಾರೆಯೇ? ಇದರಿಂದ ಎಲ್ಲಾ ಹೆಣ್ಣು ಮಕ್ಕಳು ಮುಂದುವರಿದಿದ್ದಾರೆ ಎಂದರೆ ಸರಿಯೇ?

ಸಮಾಜ ಇದರ ಬಗ್ಗೆ ಚಿಂತಿಸುತ್ತಿದೆಯೇ? ಸರಕಾರ ಇದರ ಬಗ್ಗೆ ಯೋಚಿಸುತ್ತಿದೆಯೇ? ಅಥವಾ ಸ್ವತಃ ಸ್ತ್ರೀ ಸಮುದಾಯ ಇದರ ಬಗ್ಗೆ ಚಿಂತಿಸುತ್ತಿದೆಯೇ? ಎಲ್ಲಾ ಪ್ರಶ್ನೆಗಳಿಗೂ ಹೌದು ಅಥವಾ ಇಲ್ಲ ಎಂದು ಉತ್ತರ ಹೇಳಬಹುದು. ಸರಕಾರ ಸಂವಿಧಾನಾತ್ಮಕವಾಗಿ ಅನೇಕ ಸಲವತ್ತುಗಳನ್ನು ಒದಗಿಸಿದೆ. ಶಿಕ್ಷಣದಲ್ಲಿ, ಉದ್ಯೋಗದಲ್ಲಿ ರಾಜಕೀಯದಲ್ಲಿ ಹೆಣ್ಣಿಗೆ ಮೀಸಲಾತಿ ಕೊಟ್ಟಿದೆ. ಕೇವಲ ಕಾನೂನು ಮಾತ್ರ ಇದನ್ನು ಪೂರೈಸುವುದಿಲ್ಲ. ಸ್ತ್ರೀಪುರುಷರಲ್ಲಿ ತಾವು ಮಾನಸಿಕವಾಗಿ, ಬೌದ್ಧಿಕವಾಗಿ ಸಮಾನರು ಎಂಬ ಅಭಿಪ್ರಾಯ ಬರಬೇಕು. ಸಮಾಜದ ಚಿಂತನ ಕ್ರಮ ಬದಲಾಗಬೇಕು.

ಹೆಣ್ಣು ನ್ಯಾಯ ಪಡೆಯಲು ತನ್ನ ವ್ಯಕ್ತಿತ್ವ ಪ್ರಕಾಶಿಸಲು ಹೋರಾಟಕ್ಕಿಳಿಯುವ ಅವಶ್ಯಕತೆ ಇದೆ. ಎಲ್ಲಿಂದಲೋ ನಮಗೆ ನ್ಯಾಯ ದೊರೆಯುತ್ತದೆ ಎಂದು ಕಾದು ಕುಳಿತರೆ ಉಪಯೋಗವಿಲ್ಲ.

**ಹೋರಾಟ** : ಹೆಣ್ಣು ವೈಯಕ್ತಿಕ ಶೋಷಣೆ ಮತ್ತು ಸಾಮಾಜಿಕ ಶೋಷಣೆಗೆ ಒಳಪಟ್ಟಿದ್ದಾಳೆ. ಮನೆಯಲ್ಲಿ ತನ್ನ ಮೇಲಾಗುತ್ತಿರುವ ಹಿಂಸೆಯನ್ನು ಆಕೆ ಹೇಗೆ ನಿವಾರಿಸಿಕೊಳ್ಳುತ್ತಾಳೆ. ಶ್ರೀಮಂತ ವರ್ಗ ಮತ್ತು ಮಧ್ಯಮ ವರ್ಗದ ಕುಟುಂಬಗಳಲ್ಲಿ ಮಹಿಳೆಯರು ಈ ರೀತಿಯ ಹಿಂಸೆಯಿಂಧ ಅಲ್ಪ ಸ್ವಲ್ಪ ಮುಕ್ತಿ ಪಡದಿರಲೂ ಬಹುದು. ಆದರೆ ಬಡ ಕುಟುಂಬಗಳಲ್ಲಿ ಮತ್ತು ಕೆಳವರ್ಗದ ಕುಟುಂಬಗಳಲ್ಲಿ ಈ ಹಿಂಸೆ ದೂರವಾಗಿಲ್ಲ, ಅದು ದಿನೇ ದಿನೇ ಬೃಹದಾಕಾರವಾಗಿ ಬೆಳೆಯುತ್ತಿದೆ. ಹೊರೆ ಹೆಚ್ಚುತ್ತಿದೆ. ಬೆಳೆಯುತ್ತಿರುವ ಜನಸಂಖ್ಯೆ, ಬಡತನ, ನಿರಕ್ಷರತೆ ಇವರಿಗೆ ಬಿಡುಗಡೆ ನೀಡಲು ಸಹಕಾರಿಯಾಗದು. ಇವರಿಗೆ ವಿದ್ಯಾಭ್ಯಾಸದ ಅವಕಾಶ ಕಲ್ಪಿಸುವುದೇ ಇವರ ಬಿಡುಗಡೆಗೆ ಸೋಪಾನವಾಗಬೇಕು.



ಇಂದು ಮಹಿಳೆಯರ ಪರವಾಗಿ ಕೆಲಸ ಮಾಡಲು ಹಲವಾರು ಸಂಘಟನೆಗಳು ಇವೆ. ಎಪ್ಪತ್ತರ ದಶಕದ ಕೊನೆಯಲ್ಲಿ ದೇಶದ ರಾಜಕೀಯ ಮತ್ತು ಆರ್ಥಿಕ ಪರಿಸ್ಥಿತಿಗಳ ಒತ್ತಡದೊಂದಿಗೆ ಈ ನೆಲದಲ್ಲೂ ಹೆಣ್ಣು ಮಕ್ಕಳ ಸಮಸ್ಯೆಗಳನ್ನು ಎತ್ತಿ ಹೋರಾಡಲು ಹಲವಾರು ಸಂಘಟನೆಗಳು ಹುಟ್ಟಿಕೊಂಡವು. ಇವುಗಳಲ್ಲಿ ಮೈಸೂರಿನ ಸಮತಾ ವೇದಿಕೆ, ಬೆಂಗಳೂರಿನ ವಿಮೋಚನಾ, ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ, ಜನವಾದಿ ಮಹಿಳಾ ಸಂಘಟನೆಗಳು ಮುಖ್ಯವಾದವು. ಇವು ಪುರುಷ ಪ್ರಧಾನ ವ್ಯವಸ್ಥೆಯ ಮೌಲ್ಯಗಳ ವಿರುದ್ಧ, ಸ್ತ್ರೀಯರ ಮೇಲಿನ ದಬ್ಬಾಳಿಕೆ, ಅತ್ಯಾಚಾರ, ವರದಕ್ಷಿಣೆ, ಬಹುಪತ್ನಿತ್ವ, ವಿವಾಹ ವಿಚ್ಛೇದನ, ವಧುಗಳನ್ನು ಸುಡುವುದು, ಬೀಡಿ ಕಾರ್ಮಿಕರ ಸ್ತ್ರೀಯರ ಸಮಸ್ಯೆ ಮುಂತಾದುವುಗಳ ವಿರುದ್ಧ ಬಿಡಿಬಿಡಿಯಾಗಿ ಹೋರಾಡುತ್ತಾ ಬಂದಿದೆ. ಇವರು ಪತ್ರಿಕೆಗಳಲ್ಲಿ ಲೇಖನ ಬರೆಯುವುದರ ಮೂಲಕ, ವಿಚಾರ ಸಂಕಿರಣಗಳನ್ನು ಏರ್ಪಡಿಸುವ ಮೂಲಕ ಸಭೆ, ಚರ್ಚೆ, ಸಮಾರಂಭ ಸಂಘಟಿಸುವ ಮೂಲಕ ಪ್ರತಿಭಟನೆ ಪ್ರಾರಂಭಿಸಿದರು. ಮೂರು ವಿಶ್ವವಿದ್ಯಾನಿಲಯಗಳಲ್ಲಿ ಮಹಿಳಾ ಅಧ್ಯಯನ ಪೀಠಗಳಿವೆ. ಸಮಖ್ಯಾ, ಮಹಿಳಾ ಸಾಂಸ್ಕೃತಿಕ ಸಂಘದಂತಹ ಸಂಘಟನೆಗಳು ದಲಿತ ಮಹಿಳೆಯರಿಗಾಗಿ ದುಡಿಯುತ್ತಿವೆ. ಇದರೊಂದಿಗೆ ಸಮತಾ, ಮಹಿಳಾ ಸಮಾಜಗಳು, ಸಾಕ್ಷರತಾ ಆಂದೋಲನಗಳು ಮಹಿಳೆಯರ ಏಳಿಗೆಗಾಗಿ ಕೆಲಸ ಮಾಡುತ್ತಿವೆ.

ಆದರೆ ಈ ಸಂಘಟನೆಗಳಲ್ಲಿ ಹೋರಾಟ ಪ್ರಾಮಾಣಿಕವಾಗಿ ನಡೆಯುತ್ತಿದ್ದರೂ ಇದು ಎಲ್ಲಾ ವರ್ಗದ ಜನರನ್ನೂ ಬದಲಾಯಿಸಬಲ್ಲಷ್ಟು ಪ್ರಬಲ ಆಂದೋಲನವಾಗಿ ಬೆಳೆಯುತ್ತಿಲ್ಲ. ಇದಕ್ಕೆ ಈ ಸಂಘಟನೆಗಳಲ್ಲಿ ಕೆಲಸ ಮಾಡುತ್ತಿರುವವರು ತಮ್ಮನ್ನು ತಾವೇ ವಿಮರ್ಶಿಸಿಕೊಳ್ಳಬೇಕು. ಸಿನಿಕರ ಮಾತುಗಳಿಗೆ ಬೆಲೆ ಕೊಡಬಾರದು. ಅವುಗಳನ್ನು ಉದಾಸೀನ ಮಾಡಬೇಕು.

ಪುರುಷ ಸಮೂಹವನ್ನು ಈ ಹೋರಾಟದಲ್ಲಿ ತೊಡಗಿಸುವುದು ಅತ್ಯಂತ ಅವಶ್ಯಕ. ಅವರನ್ನು ಬಿಟ್ಟು ಹೋರಾಟ ಮಾಡಿದರೆ, ಇದು ಸಮಾಜದ ಸಮಸ್ಯೆಯಾಗದೆ, ಕೇವಲ ಹೆಣ್ಣು ಮಕ್ಕಳ ಸಮಸ್ಯೆಯಾಗಿ ಉಳಿಯುವ ಅಪಾಯವಿದೆ. ಪ್ರತಿ ಹಂತದಲ್ಲಿ ಗಂಡಸರಿಂದ ನಿರ್ಮಿತವಾದ ವ್ಯವಸ್ಥೆಯೊಂದಿಗೆ ಹೋರಾಡಬೇಕಾಗಿರುವುದರಿಂದ ಇದು ಅನಿವಾರ್ಯ. ಅವರ ಜೊತೆಯಲ್ಲಿದ್ದುಕೊಂಡು, ಅವರ ಹೆಗಲಿಗೆ ಹೆಗಲು ಕೊಟ್ಟು ದುಡಿಯುತ್ತಾ ಅವರ ದಬ್ಬಾಳಿಕೆಗಳನ್ನು ಪ್ರಶ್ನಿಸಬೇಕು. ಆಗ ಹೆಣ್ಣು ಮಕ್ಕಳ ಸಾಮರ್ಥ್ಯ ಅವರಿಗೆ ಅರ್ಥವಾದೀತು. ನ್ಯಾಯ ದೊರತೀತು.

ಒಂದೇ ದುರಂತವೆಂದರೆ ಈ ಸಂಘಟನೆಗಳ ಕೆಲಸಗಳ ಯಾವ ಅರಿವೂ ನಮ್ಮ ಹಳ್ಳಿಯ ಹೆಣ್ಣು ಮಕ್ಕಳಿಗಿಲ್ಲ. ಹೆಣ್ಣು ಮಕ್ಕಳಲ್ಲಿ ಅನ್ಯಾಯಕ್ಕೊಳಗಾಗಿರುವ ದೊಡ್ಡ ಸಮೂಹ ಹಳ್ಳಿಗಳಲ್ಲಿ

ವಾಸಿಸುತ್ತವೆ. ಅವರು ತಾವಿರುವ ಸಾಮಾಜಿಕ ವ್ಯವಸ್ಥೆಯಲ್ಲಿ ಗಂಡಸರೊಂದಿಗೆ ನಡೆಸುವ ಜೀವನಕ್ಕೆ ಹೆಚ್ಚು ಬದ್ಧತೆಯನ್ನು ಹೊಂದಿರುತ್ತಾರೆ. ಇವರನ್ನು ಸಂಘಟನೆಯ ತೆಕ್ಕೆಗೆ ತರಲು ಕೇವಲಚರ್ಚೆ, ಉಪನ್ಯಾಸ, ಭಾಷಣದಿಂದ ಸಾಧ್ಯವಿಲ್ಲ. ಇದಕ್ಕೆ ಬೇರೆ ಮಾರ್ಗ ಕಂಡು ಹಿಡಿಯುವುದು ಅವಶ್ಯಕವಾಗಿದೆ. ಇದೇ ಇಂದಿನ ಮಹಿಳಾ ಸಂಘಟನೆಗಳ ಮುಂದಿರುವ ಸಮಸ್ಯೆ ಮತ್ತು ಸವಾಲು. ಹೆಣ್ಣು ಮಕ್ಕಳನ್ನು ಇಂತಹ ಸಮಸ್ಯೆಗಳ ವಿರುದ್ಧ ಹೋರಾಡುವಂತೆ ಮಾಡುವುದು ಸ್ತ್ರೀವಾದಿಗಳ ಜವಾಬ್ದಾರಿಯಾಗಿದೆ.

ಶೋಷಣೆಗೊಳಗಾದ ಹೆಣ್ಣು ಮಕ್ಕಳು ಪ್ರತಿಭಟಿಸಿ ನಿಲ್ಲಬೇಕಾಗಿದೆ. ಆತ್ಮವಿಶ್ವಾಸ ಬೆಳೆಸಿಕೊಳ್ಳಬೇಕು, ಕೀಳರಿಮೆ ಬಿಡಬೇಕು. ಧೈರ್ಯದಿಂದಸಮಸ್ಯೆ ಎದುರಿಸಬೇಕು, ಅವಕಾಶಗಳು ಸಿಕ್ಕಾಗ ಮುನ್ನುಗ್ಗಬೇಕು, ಗಂಡಿನ ಸಮನಾಗಿ ದುಡಿಯುವ ಶಕ್ತಿ ತನ್ನಲ್ಲಿಯೂ ಇದೆ ಎಂದು ಹೆಣ್ಣು ಅರ್ಥ ಮಾಡಿಕೊಳ್ಳಬೇಕು. ತನ್ನಿಂದ ಯಾವುದೇ ಕೆಲಸ ಅಸಾಧ್ಯವಲ್ಲ ಎಂದು ಆಕೆ ಮನಗಾಣಬೇಕು. ತಾನು ಕೇವಲ ಅಲಂಕಾರದ ಬೊಂಬೆಯಲ್ಲ ಎಂದು ಆಕೆ ತಿಳಿಯಬೇಕು. ಸಮಾಜಕ್ಕೆ ತನ್ನ ಕೊಡುಗೆಯೂ ಅಮೂಲ್ಯ ಎಂದು ತಿಳಿದುಕೊಳ್ಳಬೇಕು, ಮದುವೆಯೇ ತನ್ನ ಜೀವನಕ್ಕೆ ಮುಕ್ತಿ ಎಂದು ಭಾವಿಸಬಾರದು, ಅವಲಂಬಿತಳಾಗದೆ ಆಕೆ ಎಲ್ಲಾ ಕೆಲಸಗಳನ್ನು ಮಾಡಿಕೊಳ್ಳಲು ಮುಂದಾಗಬೇಕು.

ಹೆಣ್ಣು ಗಂಡಿನ ಸಮಾನತೆ ಕೇವಲ ಕಾನೂನಿನಿಂದ ಮಾತ್ರ ಸಾಧ್ಯವಿಲ್ಲ. ಹೆಣ್ಣು ಇಂದು ಎಲ್ಲಾ ಕ್ಷೇತ್ರಗಳಲ್ಲಿ ಗಂಡಿಗೆ ಸಮಾನವಾಗಿ ದುಡಿದರೂ ಅತಿ ದೊಡ್ಡ ಮಹಿಳಾ ಸಮುದಾಯ ಎಲ್ಲಾ ಅವಕಾಶಗಳಿಂದಲೂ ವಂಚಿತವಾಗಿದೆ. ಇಂದು ಆ ಸಮೂಹವನ್ನು ಬಿಡುಗಡೆಗೊಳಿಸಬೇಕಾಗಿದೆ. ಇದನ್ನು ಶಿಕ್ಷಣದಿಂದ ಮಾತ್ರ ಸಾಧಿಸಬಹುದಾದರೂ, ಹೆಣ್ಣಿನ ಮನಸ್ಥೈರ್ಯವೂ ಜೊತೆಗೂಡಬೇಕಾಗುತ್ತದೆ.

"ಮಹಾ + ಇಳೆ" ಎಂದರೆ ಮಹಿಳೆ. ಅತೀ ಶ್ರೇಷ್ಠವಾದ ಮಹಾನ್ ಭೂಮಿ ಎಂದರ್ಥ. ಭೂಮಿ ಸರ್ವರಿಗೆ ಆಶ್ರಯ ನೀಡುತ್ತದೆ. ಯಾರನ್ನೂ ತಿರಸ್ಕರಿಸದೆ ಅವರ ಅವಶ್ಯಕತೆಗಳನ್ನು ಪೂರೈಸುತ್ತದೆ. ಹಾಗೆಯೇ ಹೆಣ್ಣು ಮಗು, ಪ್ರಪಂಚದ ಎಲ್ಲಾ ನೋವುಗಳನ್ನು ಸಹಿಸಿಕೊಂಡು ನರಳುತ್ತಿದೆ. ಭೂಮಿ ಇರುವುದೇ ತುಳಿಯುವುದಕ್ಕೆ, ಅದು ಬಿಟ್ಟು ತಲೆಯ ಮೇಲೆ ಹೊತ್ತುಕೊಳ್ಳುವುದಕ್ಕಾಗುತ್ತದಾ? ಎಂಬ ಧೋರಣೆಯ ಪುರುಷ ಸಮೂಹದ ನಿರಂತರ ದಮನಕ್ಕೆ ಒಳಗಾಗಿ, ಬಿಡುಗಡೆಗಾಗಿ ಹೋರಾಡುತ್ತಿದೆ. ಹೆಣ್ಣು ಜೀವಿ ಇಲ್ಲದಿದ್ದರೆ ವಿಕಾಸವೇ ಆಗುತ್ತಿರಲಿಲ್ಲ ಎಂಬ ಸತ್ಯ ತಿಳಿದರೂ ಗಂಡು ಪಕ್ಷಪಾತ ತೋರುತ್ತಿದೆ. ಈ ಹೋರಾಟ ಹೆಣ್ಣು, ಗಂಡುಗಳೆರಡೂ ಕೂಡಿ ಮಾಡುವ ಪ್ರಕ್ರಿಯೆಯಾಗಬೇಕು. ಇಬ್ಬರ ಕೊಡುಗೆಯೂ ಅಮೂಲ್ಯವಾದುದು. ಇದನ್ನು ಸಮಾಜ ಅರಿತರೆ ಸಮಾನತೆಯ ಕನಸು ನನಸಾಗುತ್ತದೆ. "ಹೆಣ್ಣು ಹುಟ್ಟಿತೇ?" ಎಂಬ ತಿರಸ್ಕಾರದ ಮಾತು ಎಂದೂ ಕೇಳಿಸದಾಗುತ್ತದೆ.

ಗ್ರಂಥ ಋಣ : "ಅಚಲಾ" ಪತ್ರಿಕೆಯ ಒಂದು ಸಂಚಿಕೆ.

# ಭಾರತ ಜ್ಞಾನ ವಿಜ್ಞಾನ ಸಮಿತಿ

ಕರ್ನಾಟಕ ರಾಜ್ಯ

## ಪ್ರಕಟಣೆಗಳು

1. ಸಾಕ್ಷರತೆ ಏಕೆ?
2. ಬಿಜಿವಿಎಸ್ ಧ್ಯೇಯಗಳು, ಕನಸುಗಳು, ಗುರಿಗಳು, ಸಾಧನೆಗಳು......
3. ಸಾಕ್ಷರತಾ ಆಂದೋಲನದ ಕೈಪಿಡಿ
4. ಸಾಕ್ಷರೋತ್ತರ ಕಾರ್ಯಕ್ರಮದ ಮಸುಕಾದ ವಲಯಗಳು
5. ನಮ್ಮ ಆರೋಗ್ಯ ನಮ್ಮ ಕೈಯಲ್ಲಿ
6. ಚಿಣ್ಣರ ಲೋಕ
7. ಬಳಕೆದಾರರೆ ಎಚ್ಚೆತ್ತುಕೊಳ್ಳಿ
8. ನಿಸರ್ಗ, ಸಮಾಜ, ವಿಜ್ಞಾನ
9. ಏಳು ಎಚ್ಚರವಾಗು
10. ಹೊತ್ತಿತೋ ಹೊತ್ತಿತೋ ಅಕ್ಷರದಾ ದೀಪ
11. ತಾಯಿ ಮತ್ತು ಮಗುವಿನ ಆರೋಗ್ಯ
12. ಕತ್ತಲೆ ಮತ್ತು ಬೆಳಕು
13. ಅತಿಬೇಧಿ
14. ಮುದ್ದು ಮಗು ನಿನ್ನ ನಗು
15. ಆರೋಗ್ಯ ಹೇಗೆ? ಅನಾರೋಗ್ಯ ಏಕೆ?
16. ಒಂದು ಮುಂಜಾನೆಯ ಜಾದು
17. ಜ್ಞಾನದ ಪರಂಪರೆ
18. ನಮ್ಮ ಸ್ವಾತಂತ್ರ್ಯ
19. ನಮ್ಮ ಸಮಾಜ ನಮ್ಮ ಜೀವನ
20. ನೀನು ಹುಟ್ಟಿದ್ದು ಹೇಗೆ?

## ಭಾರತ ಜ್ಞಾನ ವಿಜ್ಞಾನ ಸಮಿತಿಯ ಉದ್ದೇಶಗಳು

1. ಮೊದಲಿಂದಲೂ ಜನರ ಬೆಂಬಲವನ್ನು ಸಂಪೂರ್ಣ ಸಾಕ್ಷರತಾ ಆಂದೋಲನಕ್ಕೆ ಒದಗಿಸಿಕೊಡುವುದು.
2. ಯೋಜನೆಯ ಎಲ್ಲಾ ಹಂತಗಳಲ್ಲೂ ಸಹಕರಿಸುವುದು-ಜನರನ್ನು, ಪರಿಸರವನ್ನು ಯೋಜನೆಯ ಸಹಾಯಕ್ಕೆ ತಿರುಗಿಸುವುದು-ತರಬೇತಿ ನೀಡುವುದು, ಜನರ ಬೆಂಬಲವನ್ನು ಬಲಗೊಳಿಸಿ ಕಾಯ್ದಿರಿಸುವುದು.
3. ಸತತವಾಗಿ ಅಧಿಕಾರಿಗಳ,ರಾಜಕಾರಣಿಗಳ, ಸ್ವಯಂ ಸೇವಾ ಸಂಘಗಳ, ಕಾರ್ಮಿಕ ಸಂಘಗಳ, ಬುದ್ಧಿಜೀವಿಗಳ ಸಂಪರ್ಕವಿಟ್ಟುಕೊಂಡು ಸಾಕ್ಷರತಾ ಆಂದೋಲನಕ್ಕೆ ಪ್ರೋತ್ಸಾಹ ಮತ್ತು ಸಹಾಯವನ್ನು ನೀಡವುದು.
4. ಜಿಲ್ಲೆಗಳಲ್ಲಿ ಮತ್ತು ರಾಜ್ಯಗಳಲ್ಲಿ ಭಾರತ ಜ್ಞಾನ ವಿಜ್ಞಾನ ಸಮತಿಯ ಕೇಂದ್ರಗಳನ್ನು ತೆರೆದು ಸಾಕ್ಷರತಾ ಆಂದೋಲನವನ್ನು ಸ್ಥಿರಗೊಳಿಸುವುದು, ಇದರಿಂದ ಸಾಕ್ಷರತಾ ಕಾರ್ಯಕ್ರಮದ ನಂತರವೂ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣ, ಮಹಿಳೆಯರ ಅಭಿವೃದ್ಧಿ, ಆರೋಗ್ಯ, ಸಾಂಸ್ಕೃತಿಕ ಜಾಗೃತಿ ಮುಂದುವರಿಸಲು ಸಹಾಯ ಮಾಡಲಾಗುವುದು. ಸಂಘಟನೆಗಳನ್ನು ರಚಿಸುವುದು ಮತ್ತು ಜನರೊಂದಿಗೆ ವಿಶ್ವಾಸದಿಂದ ಸಂಪರ್ಕ ಹೊಂದಿರುವುದು, ಪ್ರಜಾಪ್ರಭುತ್ವದಲ್ಲಿ ಜನರನ್ನು ಅಭಿವೃದ್ಧಿಯ ಕಡೆಗೆ ಸೆಳೆದೊಯ್ಯಲು ಸಹಾಯಕವಾಗುವುದು.

## ಜನವಾಚನ ಆಂದೋಲನದ ಉದ್ದೇಶಗಳು

1. ಸಾಕ್ಷರತಾ ಆಂದೋಲನದಲ್ಲಿ ಅಥವಾ ಇನ್ಯಾವುದೇ ಕಾರ್ಯಕ್ರಮದ ಮೂಲಕ ಓದು ಬರಹ ಕಲಿತ ಸಾವಿರಾರು ಜನರಿಗೆ ಪುಸ್ತಕಗಳನ್ನು ಪರಿಚಯಿಸಿ ಓದುವ ಹವ್ಯಾಸ ಬೆಳೆಸುವುದು.
2. ಸರಳವಾಗಿ ಹಾಗೂ ಉತ್ತಮವಾಗಿರುವ ಪುಸ್ತಕಗಳನ್ನು ಹೊರತರುವುದು ಹಾಗೂ ಇದು ಸಾಮಾನ್ಯ ಜನರಿಗೆ ಕೈಗೆಟಕುವ ಬೆಲೆಗೆ ಸಿಗಬೇಕು.
3. ಗ್ರಾಮ ಹಾಗೂ ಪಟ್ಟಣದ ಜನರ ಮನೆ ಬಾಗಿಲಿಗೆ ಪುಸ್ತಕಗಳನ್ನೊಯ್ದು ಅವರು ಕೊಂಡು ಕೊಳ್ಳುವಂತೆ ಮನವೊಲಿಸುವುದು.
4. ವಿವಿಧ ರೀತಿಯ ಓದುಗರಿಗೆ ಅದರಲ್ಲೂ ವಿಶೇಷವಾಗಿ ಮಹಿಳೆಯರಿಗೆ ಓದಲು ಪುಸ್ತಕಗಳು ಸಿಗುವಂತೆ ಗ್ರಾಮೀಣ ಪ್ರದೇಶದಲ್ಲಿ ಗ್ರಂಥಾಲಯಗಳನ್ನು ಆರಂಭಿಸುವುದು.
5. ಜನರಿಗೆ ಪುಸ್ತಕಗಳನ್ನು ಪರಿಚಯಿಸುವ, ಗುಂಪಾಗಿ ಕುಳಿತು ವಾಚಿಸಲು ಪ್ರೇರೇಪಿಸುವ ಹಾಗೂ ಮಾರಾಟ ಮಾಡುವ ನೂರಾರು ಕಾರ್ಯಕರ್ತರನ್ನು ತರಬೇತಿಗೊಳಿಸುವುದು.
6. ಗ್ರಾಮೀಣ ಪ್ರದೇಶದಲ್ಲಿ ಪುಸ್ತಕ ಪ್ರದರ್ಶನ ಏರ್ಪಡಿಸುವುದು.